## ಅಧ್ಯಾಯ 6

# ಪಾಪವನ್ನು ದೂರವಿರಿಸುವದು

ಪೌಲನು, ಅನ್ಯಜನರಿಗೆ ಅಪೊಸ್ತಲನು, ಪ್ರಸಂಗಿ, ತತ್ವಜ್ಞಾನಿಯಲ್ಲ. 1 ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಅವನು ಸುವಾರ್ತೆಯ ದೈವಜ್ಞಾನಶಾಸ್ತ್ರವನ್ನು ಪ್ರಕಟಿಸಿದ್ದಾನೆ, ಆದರೆ ಆತನು ಅದರ ವಿವರಗಳನ್ನು ವಿವರಿಸಲು ಸ್ವಲ್ಪ ಸಮಯವನ್ನು ತೆಗೆದುಕೊಂಡಿದ್ದಾನೆ. ಕೊರಿಂಥದಲ್ಲಿರುವ ಅನೇಕ ಕ್ರೈಸ್ತರಿಗೆ ಅವರ ವಿಗ್ರಹಾರಾಧಕ ಸಮುದಾಯದ ಕುರಿತು ನೇರವಾದ ಅನುಭವವಿತ್ತು. ಅವರು ಪ್ರಾಯೋಗಿಕ ಜನರಾಗಿದ್ದರು, ತಮ್ಮನ್ನು ತಾವು ನೋಡಿಕೊಳ್ಳುವವರು ಮತ್ತು ತಮ್ಮ ಸ್ವಂತ ವಿಷಯಗಳನ್ನು ಕಾಪಾಡಿಕೊಳ್ಳುವವರು ಆಗಿದ್ದರು. ಪೌಲನ ಓದುಗರು, ಅನೇಕ ಭಾಗಗಳಲ್ಲಿ, ಗ್ರೀಕ ಸಾಮಾಜಿಕ ಆರ್ಥಿಕ ಹಂತದಲ್ಲಿ ಕೆಳಗಿನ ಮಟ್ಟದಲ್ಲಿ ಇರಲಿಲ್ಲ, ಬದುಕಿರುವದಕ್ಕಾಗಿ ಶ್ರಮವಹಿಸಿ ಕೆಲಸಮಾಡುವವರಾಗಿದ್ದರು. ಅವರಿಗೆ ಸ್ವಲ್ಪ ಮಟ್ಟಿಗೆ ಸಮೃದ್ಧಿಯಿತ್ತು ಮತ್ತು ರೋಮನ್ ಲೋಕದ ತಿರುವುಗಳಲ್ಲಿ ವೃದ್ಧಿಹೊಂದುತ್ತಿರುವ ಸುಶಿಕ್ಷಿತ ತತ್ವಜ್ಞಾನಶಾಸ್ತ್ರವನ್ನು ಆದರಿಸಿದ ವೃತ್ತದಲ್ಲಿ ಏನು ಸಂಭವಿಸುತ್ತಿದೆ ಎಂಬುದರ ಕುರಿತು ತಿಳುವಳಿಕೆಯುಳ್ಳವರಾಗಿದ್ದರು. ಪೌಲನು ವಿಗ್ರಹಾರಾಧಕರ ಜೀವನ ಶೈಲಿಯಲ್ಲಿ ಆಳವಾಗಿ ಬೇರೂರಿದ ಅವರನ್ನು ಅವರ ಪಾಪಗಳಿಂದ ವಿಮೋಚಿಸಲು ತನ್ನ ಮಗನನ್ನು ಕಳುಹಿಸಿದ ಒಬ್ಬನೇ ನಿಜವಾದ ದೇವರ ಸುವಾರ್ತೆಯ ಸಂದೇಶಕ್ಕೆ ವಿಧೇಯರಾಗುವತ್ತ ನಡೆಸಿದನು. ಸುವಾರ್ತೆಯನ್ನು ಅವರು ಸ್ವೀಕರಿಸಿದ್ದು ಅವರಿಗೆ ಮಹತ್ವದ ಪ್ರಾರಂಭದ ಅಂಶವಾಯಿತು.

ಕೊರಿಂಥದಲ್ಲಿ ಕ್ರಿಸ್ತನ ಬಳಿಗೆ ಬಂದವರು ಅನೇಕ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ದೈವತ್ವದ ಸ್ವರೂಪದ ಕುರಿತು ಹೊಸ ವಿಚಾರಗಳನ್ನು ಅಪ್ಪಿಕೊಳ್ಳುವದರೊಂದಿಗೆ, ಅವರು ದೇವ ಜನರಾಗಿ ಒಬ್ಬರೊಂದಿಗೆ ಒಬ್ಬರು ಹೇಗೆ ವ್ಯವಹರಿಸಬೇಕೆಂದು ಅವರು ಕಲಿಯಬೇಕಾಗಿತ್ತು. 1 ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನ ಜಿಗುಪ್ಸೆ ಎಂದರೆ ಸಹ ವಿಶ್ವಾಸಿಗಳ ಇಂಥಹ ನಿಧಾನವಾದ ಬೆಳವಣಿಗೆಯನ್ನು ಮಾಡುತ್ತಿರುವದೇ. ಅವರು ನಿಷ್ಠೆಯಿಂದ ಅಚ್ಚುಮೆಚ್ಚಿನ ಬೋಧಕರನ್ನು ಮಾಡಿಕೊಳ್ಳುವತ್ತ ಬೆಳೆದಿದ್ದರು. ಅವರಲ್ಲಿ ನಿಜವಾದ ಬೋಧನೆಗಿಂತ ವಯಕ್ತಿಕ ಪಕ್ಷಪಾತಗಳು ಹೆಚ್ಚಾಗಿದ್ದಾಗಲೂ ಅವರು ಅನೇಕ ವಿಗ್ರಹಾರಾಧಕರಾದ ಪಂಗಡಗಳಾಗಿ ವಿಭಾಗಿಸಿಕೊಂಡು ಸಮಕಾಲಿನರನ್ನು ಅನುಸರಿಸುತ್ತಿದ್ದರು. ಅವರು ತಮ್ಮ ಸುಶಿಕ್ಷಿತ ಬೋಧನೆ ಮತ್ತು ಪದಗಳ ಮಧ್ಯದಲ್ಲಿರುವ ಸಂಪೂರ್ಣ ವ್ಯತ್ಯಾಸಗಳೆಡೆಗೆ ಇರುವ ಪ್ರೀತಿಯಿಂದಾಗಿ ಒಬ್ಬರನ್ನೊಬ್ಬರು ಮೆಚ್ಚಿಸುವದಕ್ಕಾಗಿ ಕ್ರೈಸ್ತ ಸಮುದಾಯದ ಐಕ್ಯತೆಯನ್ನು ತ್ಯಾಗಮಾಡುತ್ತಿದ್ದರು.

# ಸಹ ಕ್ರೈಸ್ತರ ವಿರೋಧವಾಗಿ ಮೊಕದ್ದಮೆಗಳನ್ನು ದೂರವಿರಿಸುವದು (6:1-11)[1]

ವಿಶ್ವಾಸಿಗಳು ಬೋಧಕರ ಕುರಿತು ನಿಷ್ಠೆಯ ಮೇಲೆ ವಿಶ್ವಾಸಿಗಳು ದೂರುತ್ತಿರುವಾಗ, ಅವರು ದೈವೀಕ ಜೀವಿತವನ್ನು ಕುಂಠಿತಗೊಳಿಸುವಲ್ಲಿ ಭಯವನ್ನು ಹುಟ್ಟಿಸುವ ನೈತಿಕ ಕಳಕಳಿಗಳನ್ನು ನಿರ್ಲಕ್ಷಿಸುತ್ತಿದ್ದರು. ಸಭೆಯು ತನ್ನ ಹಳೆಯ ಮಾರ್ಗವನ್ನು ಹಿಂದಕ್ಕೆ ಬಿಟ್ಟು ಹೊಸ ವಿಷಯಗಳನ್ನು ಅಳವಡಿಸಿಕೊಳ್ಳುವದು ಅವಶ್ಯವಾಗಿದೆ ಎಂಬ ಎರಡು ವಿಷಯಗಳ ಉದಾಹರಣೆಯನ್ನು ನೀಡಲಾಗಿದೆ. (1) ಕೊರಿಂಥದಲ್ಲಿರುವ ಕ್ರೈಸ್ತರು ತಮ್ಮ ಸ್ವಂತ ಮನುಷ್ಯನೊಬ್ಬನು ಮುಕ್ತವಾಗಿ ತನ್ನ ತಂದೆಯ ಹೆಂಡತಿಯೊಂದಿಗೆ ಜೀವಿಸುವದನ್ನು ಸಹಿಸಿಕೊಳ್ಳುತ್ತಿದ್ದರು. (2) ಸಹೋದರರು ತಮ್ಮ ಮಧ್ಯದಲ್ಲಿರುವ ನ್ಯಾಯಸಮ್ಮತವಾದ ಭಿನ್ನತೆಗಳನ್ನು ಅವಿಶ್ವಾಸಿಗಳ ಎದುರಿನಲ್ಲಿ ನ್ಯಾಯಾಲಯಕ್ಕೆ ಕೊಂಡೊಯ್ಯುವದರ ಮೂಲಕ ಪರಿಹರಿಸಿಕೊಳ್ಳುತ್ತಿದ್ದರು.

ಕೊರಿಂಥದ ಸಭೆ ಎದುರಿಸುತ್ತಿರುವ ನಿರ್ದಿಷ್ಟವಾದ ಪರಿಸ್ಥಿತಿ ಇನ್ನೂ ಇತರ ಪ್ರಾಚೀನ ಅಥವಾ ಆಧುನಿಕ ಸಭೆಗಳಲ್ಲಿ ಬೆಳೆಯುವ ಸಾಧ್ಯತೆಯಿತ್ತು. ಆದಾಗ್ಯೂ, ಪೌಲನ ಸಲಹೆಗಳು ಇಂದು ನೈತಿಕ ವಿಚಾರಗಳು ಏನೇ ಆಗಿರಲಿ ಅವುಗಳೊಂದಿಗೆ ವ್ಯವಹರಿಸುವವರಿಗೆ ಸಮಂಜಸವಾಗಿವೆ. ದೇವರು ಪೌಲನು ಸಂಬೋಧಿಸಿದ ನಿರ್ದಿಷ್ಟವಾದ ತತ್ವಗಳನ್ನು ಶುದ್ಧಪಡಿಸಿಕೊಳ್ಳುವದು ಕ್ರೈಸ್ತರಿಗೆ ಅವಶ್ಯವಾಗಿದೆ. ಈ ತತ್ವಗಳು ನಮಗೆ ಇಂಥದೇ ಸಮಸ್ಯೆಗಳು ಬರುವಾಗ ಮಾರ್ಗದರ್ಶನ ಮಾಡಬೇಕು. ಪೌಲನು ವಿಗ್ರಹಾರಾಧಕರ ಅಭ್ಯಾಸ ಮತ್ತು ಕ್ರೈಸ್ತ ಸಿದ್ಧಾಂತ ಮತ್ತು ನೈತಿಕತೆಯಲ್ಲಿರುವ ಹೊಸತನದ ಮಧ್ಯದಲ್ಲಿರುವ ಗಲಿಬಿಲಿಯ ಕುರಿತು ಬಲ್ಲವನಾಗಿದ್ದನು. ಅವನು ಕ್ರೈಸ್ತರನ್ನು ತಮ್ಮ ಆಚಾರಕ್ಕಿಂತ ವಿಭಿನ್ನವಾಗಿ ನಡೆದುಕೊಳ್ಳಿರಿ ಎಂಬ ಬೇಡಿಕೆಯನ್ನಿಟ್ಟಿದ್ದನು. ಈ ಉದಾಹರಣೆಯು ಪ್ರತಿಯೊಂದು ಸಮಯದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಇರುವ ಕ್ರೈಸ್ತರಿಗೆ ಮಹತ್ವದ ಸೂಚನೆಯಾಗಿದೆ.

## ಪವಿತ್ರಜೀವಿಗಳು ಲೋಕದ ವ್ಯಾಜ್ಯವನ್ನು ತೀರಿಸುವರು (6:1-3)

**1ನಿಮ್ಮಲ್ಲಿ ಒಬ್ಬನಿಗೆ ಮತ್ತೊಬ್ಬನ ಮೇಲೆ ವ್ಯಾಜ್ಯವಿದರೆ ನ್ಯಾಯವಿಚಾರಣೆಗೆ ದೇವಜನರ ಮುಂದೆ ಹೋಗದೆ ಅನ್ಯಜನರ ಮುಂದೆ ಹೋಗುವದಕ್ಕೆ ಅವನಿಗೆ ಧೈರ್ಯವುಂಟೋ? 2ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬದು ನಿಮಗೆ ತಿಳಿಯದೋ? ಲೋಕವು ನಿಮ್ಮಿಂದ ತೀರ್ಪನ್ನು ಹೊಂದಬೇಕಾಗಿರುವಲ್ಲಿ ಅತ್ಯಲ್ಪ ಸಂಗತಿಗಳನ್ನು ಕುರಿತು ತೀರ್ಪುಮಾಡುವದಕ್ಕೆ ಅಯೋಗ್ಯರಾಗಿದ್ದೀರೋ? 3ನಾವು ದೇವದೂತರಿಗೂ ತೀರ್ಪುಮಾಡುವೆವೆಂಬದು ನಿಮಗೆ ತಿಳಿಯದೋ? ಐಹಿಕ ಜೀವದ ಕಾರ್ಯಗಳನ್ನು ಕುರಿತು ನಾವು ತೀರ್ಪು ಮಾಡುವದು ದೊಡ್ಡದೋ?**

**ವಚನ 1.** ತಂದೆಯ ಹೆಂಡತಿಯೊಂದಿಗೆ ಜೀವಿಸುತ್ತಿರುವ ಮನುಷ್ಯನ ಕುರಿತಾದ ಸಮಸ್ಯೆಯಂತೆ, ಪೌಲನು ಸಹೋದರರ ಮಧ್ಯದಲ್ಲಿರುವ ಮೊಕದ್ದಮೆಯ ಸಮಸ್ಯೆಯ ಕುರಿತು ನಂಬಿಕೆಯಿಲ್ಲದವನಾಗಿದ್ದನು. ಅವನು ಮೊದಲೇ ಹೀಗೆ ಬರೆದಿದ್ದನು, “ನಿಮ್ಮಲ್ಲಿ

ಜಾರತ್ವವುಂಟೆಂದು ಜನರು ಸಾಧಾರಣವಾಗಿ ಹೇಳುತ್ತಾರೆ . . ." (5:1); ಮತ್ತು ಅವನು ಇಲ್ಲಿ ಕೇಳುತ್ತಾನೆ. **ನಿಮ್ಮಲ್ಲಿ ಯಾರಿಗಾದರೂ . . . ನ್ಯಾಯವಿಚಾರಣೆಗೆ ಹೋಗುವ ಧೈರ್ಯವಿದೆಯೋ?** ಅಪೊಸ್ತಲನು ಆಶ್ಚರ್ಯಪಡುತ್ತಾನೆ. ಕ್ರಿಸ್ತನಲ್ಲಿ ಸಮುದಾಯದ ಜೀವಿತದ ಮೂಲ ಅರ್ಥವನ್ನು ಈ ಕ್ರೈಸ್ತರು ತಪ್ಪಿದ್ದಾರೋ? ಒಬ್ಬ ಮನುಷ್ಯನ ವ್ಯಭಿಚಾರದ ಜೀವಿತವನ್ನು ನಿರ್ಲಕ್ಷಿಸುವದರ ಮೂಲಕ, ಸಭೆಯು ತನ್ನ ಸಮುದಾಯದ ಜವಾಬ್ದಾರಿಯನ್ನು ದೂರವಿರಿಸುತ್ತಿದೆಯೋ. ಸದಸ್ಯರಿಗೆ ಸರಿ ಮತ್ತು ತಪ್ಪು ಇವುಗಳ ಮಧ್ಯದಲ್ಲಿ ವ್ಯತ್ಯಾಸವನ್ನು ಗುರುತಿಸಿ ಸಭೆಯ ಶಿಸ್ತನ್ನು ಅಭ್ಯಾಸಿಸುವದು ಕರ್ತವ್ಯವಾಗಿದೆ.

> ಅವರು ತಮ್ಮ ಮಧ್ಯದಲ್ಲಿರುವ ಅಘಾತಕಾರಿಯಾದ ತಪ್ಪಾದ ಕಾರ್ಯಗಳನ್ನು ತೀರ್ಪು ನೀಡದೇ ಬಿಟ್ಟಿದ್ದು ಮಾತ್ರವಲ್ಲ; ಸಮುದಾಯದ ಸದಸ್ಯರ ಮಧ್ಯದಲ್ಲಿರುವ ಕ್ಷುಲಕ ಹಣಕಾಸಿನ ವಿವಾದಗಳನ್ನು ಹೊರಗಿನ ತೀರ್ಪು ಗಾರರಿಗೆ, ಬಹಳ ಮಟ್ಟಿಗೆ ಸ್ಥಾನಿಕ ನ್ಯಾಯಧೀಶರೆಡೆಗೆ ತಿರುಗಿಸಿದ್ದಾರೆ (6:1-11).[2]

ತನ್ನ ತದೆಯ ಹೆಂಡತಿಯೊಂದಿಗೆ ಜೀವಿಸುತ್ತಿರುವ ಮನುಷ್ಯನ ಅನೈತಿಕತೆಗೆ ಮತ್ತು ವಿಶ್ವಾಸಿಗಳ ಮಧ್ಯದಲ್ಲಿ ಮೊಕದ್ದಮೆಯ ಸಮಸ್ಯೆಗಳನ್ನು ಲೌಕಿಕ ನ್ಯಾಯಾಲಯಕ್ಕೆ ತರುವದು ಪೌಲನ ಗಮನಕ್ಕೆ ಅವನ ಮಾಹಿತಿದಾರರಿಂದ ತರಲಾಯಿತು. ಈ ಸಂಗತಿಗಳು ಸ್ತೇಫನ, ಪೊರ್ತುನಾತ ಅಖಾಯಕನ ಮೂಲಕ ಸಭೆಯು ಕಳುಹಿಸಿದ ಪತ್ರದಲ್ಲಿ ಉಲ್ಲೇಖಿಸಿರಲಿಲ್ಲ (16:17; 7:1). ಖ್ಲೋಯೆಯ ಜನರು (1:11) ಅವನಿಗೆ ಮಾಹಿತಿ ನೀಡುವ ಮೂಲಗಳಾಗಿರಬಹುದು. ಪೌಲನು 6:12-20ರಲ್ಲಿ ಲೈಂಗಿಕ ಅನೈತಿಕತೆಯ ವಿಷಯಕ್ಕೆ ತಿರುಗುವಾಗ ಹಿನ್ನೆಲೆಯಲ್ಲಿ ಉಳಿದಿರುವ ಪುಂಡಾಟದ ಸದಸ್ಯರ ಶಿಸ್ತಿಗೆ ಸಭೆಯ ಜವಾಬ್ದಾರಿಯಾಗಿತ್ತು.

ಕೊರಿಂಥದಲ್ಲಿ ಸುಮಾರು ಕ್ರಿ.ಶ. 50ರಲ್ಲಿ ಕ್ರೈಸ್ತರ ಸಂಖ್ಯೆಯನ್ನು ಅಂದಾಜುಮಾಡುವದು ಕಠಿಣವಾಗಿತ್ತು. ಸಭೆಯು ಕೆಲವೊಮ್ಮೆ ಗಾಯನ ಮನೆಯಲ್ಲಿ ಸೇರಿಬರುತ್ತಿರುವದರಿಂದ (ರೋಮಾ 16:23), ಸಭೀಕರು ಹೆಚ್ಚಿನ ಸಂಖ್ಯೆಯಲ್ಲಿ ಇರಲಿಕ್ಕಿಲ್ಲ. ಬಹುಶಃ ಸಮುದಾಯದೊಳಗೆ ಐವತ್ತು ಅಥವಾ ಒಂದನೂರರ ವರೆಗೆ ಇರಬಹುದು, ವಿಶ್ವಾಸಿಗಳು ವಿಶ್ವಾಸಿಗಳ ವಿರುದ್ಧವಾಗಿ ನ್ಯಾಯಾಲಯಕ್ಕೆ ಸಾಮಾನ್ಯ ಸಂಗತಿಗಳಾಗಿ ಹೋಗುತ್ತಿದ್ದರು ಎಂಬುದು ಅಸಂಭವನೀಯವಾಗಿದೆ. ಬಹುಶಃ, ಒಂದು ನಿರ್ಧಿಷ್ಟವಾದ ಸಂಗತಿ ಪೌಲನ ಗಮನಕ್ಕೆ ಬಂದಿರಬಹುದು. ವಿಗ್ರಹಾರಾಧಕರ ಸಮುದಾಯದಲ್ಲಿ ಮನೆಯಲ್ಲಿರುತ್ತಿದ್ದ ಕ್ರೈಸ್ತರು ಹಣಕಾಸಿನ ಮತ್ತು ಆಸ್ತಿಯ ವಿಷಯಗಳ ವಿವಾದಗಳನ್ನು ಪಟ್ಟಣದಲ್ಲಿರುವ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗುತ್ತಿರಬಹುದು. ವಿಷಯದ ಕುರಿತು ಪೌಲನ ಕೋಪ ಎರಡು ರೀತಿಯಲ್ಲಿ ಪರಿಗಣಿಸಿರುವದರಿಂದ ಮೊಳೆತಿರಬಹುದು. ಲೌಕಿಕ ನ್ಯಾಯಾಲಯಗಳು ಅಪಕೀರ್ತಿಯೊಂದಿಗೆ ಭ್ರಷ್ಟವಾಗಿದ್ದವು ಮತ್ತು ಯೆಹೂದ್ಯರಿಂದ ನ್ಯಾಯದ ಆಡಳಿತದ ಇನ್ನೂ ಹೆಚ್ಚು ಸಕಾರಾತ್ಮಕವಾದ ಮಾದರಿಯನ್ನು ತಿಳಿದವನಾಗಿದ್ದನು. ರೋಮನ್ ಆಡಳಿತದ ಅಡಿಯಲ್ಲಿಯೂ ಯೂದಾಯದಲ್ಲಿ ಮತ್ತು ಚದುರಿಹೋದ ಸಮುದಾಯದುದ್ದಕ್ಕೂ ಯೆಹೂದ್ಯ ಸಮುದಾಯವು ವ್ಯವಸ್ಥಿತವಾದ ನ್ಯಾಯಾಲಯದ ಪ್ರಕ್ರಿಯೆಗಳನ್ನು ಹೊಂದಿತ್ತು.

**ಅನೀತಿವಂತರ ಮುಂದೆ** ನ್ಯಾಯಾಲಯಕ್ಕೆ ಹೋಗುವದರ ಕುರಿತು (οἱ ἄδικοι, *hoi adikoi*) 6:1ರಲ್ಲಿ ಪೌಲನು ದೂರುವಾಗ ಅವನು ರೋಮನ ಲೋಕದಲ್ಲಿ ನ್ಯಾಯಾಲಯದ ಪ್ರಕ್ರಿಯೆಗಳ ಸಾಮಾನ್ಯ ಮೌಲ್ಯಮಾಪನವನ್ನು ಮಾಡುವದಿಲ್ಲ. ಶ್ರೀಮಂತರು ನ್ಯಾಯಾಲಯಗಳನ್ನು ನಿಗ್ರಹಿಸುತ್ತಿದ್ದರು; ವ್ಯವಸ್ಥೆಯು ನಿಷ್ಪಕ್ಷಪಾತ ತೀರ್ಪನ್ನು ನೀಡುವದಕ್ಕೆ ಹೆಸರಾಗಿರಲಿಲ್ಲ. ಬಡವರು ಕೆಲವೊಮ್ಮೆ ನ್ಯಾಯಾಲಯವನ್ನು ಆಶ್ರಯಿಸಬೇಕಾಗುತಿತ್ತು; ಮತ್ತು ಅವರು ಹಾಗೆ ಮಾಡುವಾಗ, ಸರಿಯಾದ ವಿಚಾರಣೆಯಲ್ಲಿ ಅವರಿಗೆ ಸ್ವಲ್ಪ ಮಟ್ಟಿಗೆ ಪ್ರಗತಿ ದೊರೆಯುತಿತ್ತು. David E. ಅವರು ಈ ಮೌಲ್ಯಮಾಪನವನ್ನು ನೀಡುತ್ತಾರೆ: "ಆಗಿನ ಕಾಲದಲ್ಲಿ ನಾಗರೀಕ ನ್ಯಾಯಾಲಯಗಳಲ್ಲಿ ಪಕ್ಷಪಾತ ಸ್ವಲ್ಪಮಟ್ಟಿಗೆ ಕಡಿಮೆಯಾಗಿತ್ತು. ಒಬ್ಬ ಜನಪ್ರಿಯ ಭಾಷಣಕಾರ, ನ್ಯಾಯವಾದಿ ಮತ್ತು ರಾಜಕಾರಣಿ.[3] Cicero, ಕ್ರಿ.ಪೂ. ಮೊದಲನೆಯ ಶತಮಾನದಲ್ಲಿ ರೋಮನ್‌ರು ಮತ್ತು ಪರದೇಶದವರು ಹಂಚಿಕೊಂಡ ಅಭಿಪ್ರಾಯವನ್ನು ರೋಮನ್ ನ್ಯಾಯಾಲಯದ ಮುಂದೆ ಹಂಚಿಕೊಂಡನು. "ಈ ನ್ಯಾಯಾಲಯಗಳು ಒಬ್ಬ ಮನುಷ್ಯನನ್ನು ಎಂದಿಗೂ ಅಪರಾಧಿ ಎಂದು ನಿರ್ಧರಿಸುವದಿಲ್ಲ, ಅವನಲ್ಲಿ ಹಣವಿದ್ದರೆ ಮಾತ್ರ."[4] ಯಾಕೋಬನು, "ನಿಮ್ಮನ್ನು ಭಾದಿಸಿ ನ್ಯಾಯಸ್ಥಾನಕ್ಕೆ ಎಳೆದುಕೊಂಡು ಹೋಗುವವರು ಐಶ್ವರ್ಯವಂತರಲ್ಲವೋ." ಎಂದು ಕೇಳುತ್ತಾನೆ (ಯಾಕೋಬ 2:6).

ಪೌಲನಿಗೆ ರೋಮನ್‌ರ ಎರಡು ಶ್ರೇಣಿಯ ನ್ಯಾಯ ಬೇಡವಾಗಿತ್ತು - ಒಂದು ಐಶ್ವರ್ಯವಂತರಿಗಾಗಿ ಮತ್ತು ಇನ್ನೊಂದು ಬಡವರಿಗಾಗಿ - ವಿಶ್ವಾಸಿಗಳ ಮಧ್ಯದಲ್ಲಿರುವ ವ್ಯತ್ಯಾಸವನ್ನು ನಿರ್ಧರಿಸಲು. ಕೊರಿಂಥದಲ್ಲಿರುವ ಕೆಲವು ಕ್ರೈಸ್ತರು ಬಡವರು ಮತ್ತು ಬಲವಿಲ್ಲದವರು ಆಗಿದ್ದರು, ಆದರೆ ಇತರ ಸದಸ್ಯರು ಒಂದು ಹಂತದ ಸಂಪತ್ತನ್ನು ಹೊಂದಿದ್ದರು ಮತ್ತು ಈ ಕಾರಣದಿಂದಾಗಿ ಲೋಕದಲ್ಲಿ ಉನ್ನತವಾದ ಸ್ಥಾನವನ್ನು ಹೊಂದಿದ್ದರು ಎಂದು ಸಾಕ್ಷಿಗಳು ಸಲಹೆಯನ್ನು ನೀಡುತ್ತವೆ. ಗಾಯನು ಸಭೆಯು ಕೂಡಿಬರುವದಕ್ಕಾಗಿ ಸಾಕಷ್ಟು ಸ್ಥಳವನ್ನು ಹೊಂದಿರುವ ಮನೆಯಾಗಿತ್ತು. ಕೊರಿಂಥದಲ್ಲಿರುವ ಎರಸ್ತನು ಬಹುಶಃ ಸರಕಾರದ ಸೇವೆಯಲ್ಲಿ ಮಹತ್ವದ ಸ್ಥಾನದಲ್ಲಿದ್ದಿರಬಹುದು (ರೋಮ 16:23 ನೋಡಿರಿ). ಸ್ತೇಫನನು ನಿಶ್ಚಿತವಾಗಿ ತನ್ನ ಇಬ್ಬರೂ ಸೇವಕರನ್ನು ತನ್ನೊಂದಿಗೆ ಎಫೆಸದಲ್ಲಿ ಪೌಲನನ್ನು ಬೇಟಿಯಾಗುವದಕ್ಕಾಗಿ ಕರೆತಂದಿದ್ದನು. ಸಂಪತ್ತು ಮತ್ತು ಅಂತಸ್ತು ಇದ್ದ ಕೆಲವು ಕೊರಿಂಥದ ಕ್ರೈಸ್ತರನ್ನು ಯಾರಿಗೆ ಕಡಿಮೆ ಇದೆಯೋ ಅವರೊಂದಿಗೆ ಹಂಚಿಕೊಳ್ಳಲು ಊಟವನ್ನು ಸಿದ್ಧಮಾಡುತ್ತಿದ್ದರು (1 ಕೊರಿಂಥ 11:21). ಪೌಲನು ಕೊರಿಂಥದಲ್ಲಿರುವ ಅತೀ ಬಡ ಐಶ್ವರ್ಯವಂತರು ಅವರನ್ನು ಎದುರಿಸುವಾಗ ಕ್ರೈಸ್ತರು ಪ್ರಾಪಂಚಿಕ ನ್ಯಾಯಾಲಯದಲ್ಲಿ ನ್ಯಾಯವನ್ನು ಹೊಂದುವದು ವಿರಳವಾಗಿತ್ತು. ಇಂಥಹ ಅಸಮಾನತೆ ಅವನಿಗೆ ತೊಂದರೆಯನ್ನುಂಟುಮಾಡುತ್ತಿತ್ತು. ವಯಕ್ತಿಕ ಹಂತದಲ್ಲಿ, ರೋಮನ್ ನ್ಯಾಯಾಲಯಗಳು ನ್ಯಾಯವನ್ನು ನೀಡುವದರಲ್ಲಿ ವಿಫಲವಾಗಿದ್ದವು ಎಂಬುದು ಪೌಲನಿಗೆ ತಿಳಿದಿತ್ತು. ಫಿಲಿಪ್ಪಿಯಲ್ಲಿ, ಅವನನ್ನು ಹಿಡಿದು ಚಾವಡಿ ಅಧಿಕಾರಿಗಳ ಬಳಿಗೆ ಎಳೆದುಕೊಂಡು ಹೋಗಿ ತನ್ನ ಸಮರ್ಥಿಸಿಕೊಳ್ಳಲು ಅವಕಾಶವನ್ನು ನೀಡದೇ ಹೊಡೆದರು (ಅ.ಕೃ. 16:19). ಎಫೆಸೆಯಲ್ಲಿ, ದೇಮೇತ್ರಿಯನು ನ್ಯಾಯಾಲಯದ ಹಿಡಿತ ಇಲ್ಲದಿರುವಾಗ ಕ್ರಾಂತಿಯ ಪ್ರೇರೆಪಣೆಯನ್ನು ನೀಡುವದಕ್ಕೆ ಶಕ್ತನಾದನು, (ಅ.ಕೃ.

19:24, 29). ಅಪೊಸ್ತಲನು ಈ ಪ್ರಕ್ರಿಯೆಯಲ್ಲಿ ಹೆಚ್ಚು ಕಡಿಮೆ ತನ್ನ ಜೀವಿತವನ್ನೇ ಕಳೆದುಕೊಂಡಿದ್ದನು (2 ಕೊರಿಂಥ 1:8, 9). ಫೆಲಿಕ್ಸನು "ಹಣ ದೊರೆಯಬಹುದೆಂದು ನಿರೀಕ್ಷಿಸಿ" ಅವನನ್ನು ಸೆರೆಮನೆಯಲ್ಲಿ ಹಾಕಿಸಿದ್ದನು (ಅ.ಕೃ. 24:26). ಅಪೊಸ್ತಲನಿಗೆ ಕೊರಿಂಥದ ಕ್ರೈಸ್ತರು "ಅನ್ಯಾಯದ ವಿರುದ್ದ ನ್ಯಾಯಾಲಯಕ್ಕೆ ಹೋಗುತ್ತಾರೆ, ಒಬ್ಬ ನೀತಿವಂತ ವಿರುದ್ದವಲ್ಲ" ಎಂದು ಕೋಪವಿತ್ತು (1 ಕೊರಿಂಥ 6:1).

ರೋಮನ್ ನ್ಯಾಯಾಲಯದ ನಡಾವಳಿ ಮತ್ತು ಕೆಳಮಟ್ಟದ ಅಭಿಪ್ರಾಯದೊಂದಿಗೆ, ಪೌಲನು ಯೆಹೂದ್ಯ ಸಮುದಾಯದವರು ನ್ಯಾಯವನ್ನು ನೀಡುವ ವಿಧಾನದ ಸಕಾರಾತ್ಮಕ ಮಾದರಿಯನ್ನು ಹೊಂದಿದ್ದನು. ಹಿಂಜರಿಕೆಯಿಲ್ಲದೆ, ಕ್ಲೌದ್ಯ ಲೂಸ್ಯನು ಯೆರೂಸಲೇಮಿನಲ್ಲಿರುವ ಯೆಹೂದ್ಯರ ನ್ಯಾಯಾಲಯಕ್ಕೆ ಪೌಲನ ವಿರುದ್ಧ ವಿಚಾರಣೆಯನ್ನು ಮಾಡುವದನ್ನು ಸೂತ್ರ ರೂಪದಲ್ಲಿ ವ್ಯಕ್ತಗೊಳಿಸುವದನ್ನು ಮುಂದೂಡಿದನು (ಅ.ಕೃ. 22:30; ನೋಡಿರಿ 23:26; 24:7, 22). ತಾವು ಗೆದ್ದುಕೊಂಡ ಜನರು ನಾಗರೀಕ ಮತ್ತು ನ್ಯಾಯಸಮ್ಮತವಾದ ವಿಷಯಗಳನ್ನು ತಾವೇ ನಿರ್ವಹಿಸುವಾಗ ರೋಮನ್‌ರು ಮೆಚ್ಚಿಕೊಂಡರು, ಯೆಹೂದ್ಯರು ಪಿಲಾತನ ಮುಂದೆ "ಮರಣದಂಡನೆಯನ್ನು ವಿಧಿಸುವ ಅಧಿಕಾರವು ನಮಗಿಲ್ಲ" (ಯೋಹಾನ 18:31) ಎಂದು ದೂರುವಾಗ ಅವರು ಸುಳ್ಳು ಹೇಳಿಕೆಯನ್ನು ಮಂಡಿಸಿದ್ದರು. ರೋಮನ್‌ರು ಯೆಹೂದ್ಯರಲ್ಲಿ ನಾಯಕತ್ವವಹಿಸಿದ ಯೇಸುವನ್ನು ಹೊರಗೆ ತೆಗೆದುಕೊಂಡು ಹೋಗಿ ಮುಂದಾಲೋಚನೆಯುಳ್ಳವರಾಗಿ ಅವನನ್ನು ಕಲ್ಲೆಸೆದು ಕೊಂದಿರಬಹುದೆಂದು ಪ್ರಯಾಸದಿಂದ ಗಮನಿಸಿರಬಹುದು, ಅವರು ಸ್ತೇಫನನ ವಿಷಯದಲ್ಲಿ ನಿಜವಾಗಿಯೂ ಮಾಡಿದಂತೆ (ಅ.ಕೃ. 7:58). ರಾಜಕೀಯ ಕಾರಣದಿಂದಾಗಿ ಯಾಜಕರ ಪಂಗಡದವರು ಯೇಸುವಿನ ಮರಣಕ್ಕೆ ರೋಮನ್‌ರನ್ನು ದೂರಬೇಕೆಂದಿದ್ದರು. ಪಿಲಾತನಿಗೆ ಅವರು ಏನು ಮಾಡುತ್ತಿದ್ದಾರೆ ಎಂಬುದು ತಿಳಿಯಿತು; ಅವನು ಯೇಸುವಿನ ಮುಗ್ದತೆಯನ್ನು ಗಮನಿಸಿದನು ಆದರೆ ಅವನನ್ನು ಬಿಡುಗಡೆ ಮಾಡಲು ಧೈರ್ಯವಿರಲಿಲ್ಲ. ನ್ಯಾಯಾಲಯಗಳು ಯೆಹೂದದಲ್ಲಿ ವಿಶಾಲವಾಗಿ ಹರಡಿಕೊಂಡಿದ್ದ ಚದುರಿಹೋದ ಯೆಹೂದ್ಯರಿಗೆ ನ್ಯಾಯಾಲಯಗಳು ಮಾದರಿಯಾಗಿದ್ದವು. "ಯೆಹೂದ್ಯರು ಎಲ್ಲಿಗೆ ಹೋದರು ತಮ್ಮೊಂದಿಗೆ ತಮ್ಮ ಧರ್ಮಶಾಸ್ತ್ರವನ್ನು ತೆಗೆದುಕೊಂಡು ಹೋಗುತ್ತಿದ್ದರು ಮತ್ತು ಅದರ ಮಾರ್ಗದರ್ಶನಕ್ಕೆ ಅನುಗುಣವಾಗಿ ತಮ್ಮ ಸಮುದಾಯದ ಜನರಿಗೆ ನ್ಯಾಯವನ್ನು ತೀರಿಸುತ್ತಿದ್ದರು."[5]

ಆಧುನಿಕ ಪಾಶ್ಚಿಮಾತ್ಯ ಸಂಸ್ಕøತಿಯ ನ್ಯಾಯಾಲಯದ ಅನುಭವವಿದ್ದ ಜನರು ಬಹಳ ಮಟ್ಟಿಗೆ ರೋಮನ್ ನ್ಯಾಯಾಲಯಗಳು ಯೆಹೂದ್ಯ ಅಥವಾ ಕ್ರೈಸ್ತರ ನ್ಯಾಯಾಲಯಗಳು ಒಂದರ ಮೇಲೆ ಒಂದು ಮುಚ್ಚಿರುವ ಕಾನೂನಿನ ಪರಿಧಿಯನ್ನು ಸಹಿಸುತ್ತಿರುವದು ವಿಚಿತ್ರವಾಗಿದೆ ಎಂದು ಯೋಚಿಸುತ್ತಿದ್ದರು. ಅದನ್ನು ಗುರುತಿಸಿರುವದರಿಂದ ಸಮಸ್ಯೆಯು ತೀವ್ರತೆ ಕಡಿಮೆಯಾಯಿತು, ರೋಮನ್‌ರ ಪ್ರಕಾರ, ನ್ಯಾಯಾಲಯದ ವ್ಯವಸ್ಥೆ ರಾಜ್ಯವು ತನ್ನ ಪ್ರಜೆಗಳಿಗೆ ಗಣನೀಯವಾದ ವೆಚ್ಚದೊಂದಿಗೆ ಒದಗಿಸಲಾದ ಸೇವೆಯಾಗಿತ್ತು. ಸಾರ್ವಜನಿಕ ಅಧಿಕಾರಿಗಳು ಜನಾಂಗೀಯ ಸಮುದಾಯಗಳಲ್ಲಿ ತಾವೇ ನಗರ ರಕ್ಷಕರಾಗಿರುವ ದೃಷ್ಟಿಕೋನವನ್ನು ಮತ್ತು ತಮ್ಮ ನ್ಯಾಯಾಲಯದ ಆಡಳಿತವನ್ನು ತಾವೇ ಸತಃ ನೋಡಿಕೊಳ್ಳುವದನ್ನು ಮೆಚ್ಚಿಕೊಂಡರು. ಯೆರೂಸಲೇಮಿನ ಮಹಾಯಾಜಕನು

ದಮಸ್ಕದಲ್ಲಿ ನಿಯಮಗಳನ್ನು ಜಾರಿಗೆ ತರಲು ಅಷ್ಟು ದೂರಕ್ಕೆ ಹೋದನು (ಅ.ಕೃ. 9:1, 2). Emil Schürer ಅವರು "ಇದೆಲ್ಲದರಿಂದ ಯೆಹೂದ್ಯರು ತಮ್ಮ ಸದಸ್ಯರ ಕೇವಲ ನಾಗರೀಕ ಕಾನೂನು ಪರಿಧಿಯನ್ನಷ್ಟೇ ಅಲ್ಲ ಒಂದು ರೀತಿಯಲ್ಲಿ ಅಪಾಧಿತರ ಕಾನೂನು ಪರಿಧಿಯನ್ನು ಸಹ ಪ್ರಯೋಗಿಸುತ್ತಿದ್ದರೆಂದು ತೋರಿಬರುವದಿಲ್ಲ" ಎಂದು ಹೇಳುತ್ತಾರೆ.[6] ಪೌಲನಿಗೆ, ಯೆಹೂದ್ಯರ ನ್ಯಾಯಾಲಯಗಳು ನಾಗರೀಕ ನ್ಯಾಯಾಲಯಗಳಿಗಿಂತ ಹೆಚ್ಚು ಆದರ್ಶವಾದ ನ್ಯಾಯವನ್ನು ಕ್ರೈಸ್ತರಿಗೆ ನೀಡುತ್ತಿದ್ದವು.

**ವಚನ 2.** ಪೌಲನು ಸ್ಪಷ್ಟವಾಗಿ ಕ್ರೈಸ್ತರು ತಮ್ಮ ಕಲಹಗಳನ್ನು ನಾಗರಿಕ ನ್ಯಾಯಾಲಯಗಳಿಗೆ ಹೋಗುವದಕ್ಕಿಂತ ತಮ್ಮ ಸ್ವಂತ ನ್ಯಾಯಾಧೀಶರ ಮುಂದೆ ನಿರ್ಣಯಿಸಿಕೊಳ್ಳಬೇಕು ಎಂದು ಹೇಳುವಾಗ, ಅವನು ನೀಡುವ ಬೆಂಬಲದ ವಾದವು ಅಷ್ಟೊಂದು ಸ್ಪಷ್ಟವಾಗಿಲ್ಲ. **ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬುದು ನಿಮಗೆ ತಿಳಿಯದೋ?** ಎಂದು ಆತನು ಹೇಳುತ್ತಾನೆ. ಎರಡು ವೀಕ್ಷಣೆಗಳು ಸಹಾಯಕವಾಗಬಹುದು. ಮೊದಲನೆಯದಾಗಿ, ಅಪೊಸ್ತಲನು ". . . ಪರಾತ್ಪರನು ಭಕ್ತರಿಗಾಗಿ ನ್ಯಾಯತೀರಿಸುವನು" ಎಂದು ದಾನಿಯೇಲ 7:22ನ್ನು ನಿವೇದಿಸುತ್ತಿರುವಂತೆ ತೋರಿಬರುತ್ತದೆ: LXX καὶ τὴν κρίσιν ἔδωκε τοῖς ἁγίοις τοῦ ὑψίστου (*kai tēn krisin edōke tois hagiois tou hupsistou*) ರಲ್ಲಿ ನೀಡಿದ ವೇದಭಾಗವು, ". . . ಆತನು ಪರಾತ್ಪರನ ಭಕ್ತರಿಗೆ ನ್ಯಾಯತೀರಿಸುವನು," ಇವು ದೇವರು ಕಾಲವು ಮುಗಿದುಹೋಗುವಾಗ ನ್ಯಾಯತೀರ್ಪನ್ನು ಪಟ್ಟಿಮಾಡುವನು ಎಂದು ವಿಶಾಲವಾದ ಅರ್ಥವನ್ನು ನೀಡುತ್ತದೆ. Gordon D. Fee ಅವರು ವೇದಭಾಗವು "ಪಠ್ಯದ ಸಂಪೂರ್ಣವಾದ ವಿಧಗಳಿಂದ ತೆಗೆದುಕೊಳ್ಳಲಾಗಿದೆ, ಖುರ್ಮರಾನನ್ನು ಒಳಗೊಂಡು" ಎಂದು ವೀಕ್ಷಿಸುತ್ತಾರೆ.[7] ದೇವರು ಸಂಕ್ಷಿಪ್ತವಾದ ರೀತಿಯಲ್ಲಿ ಕೊನೆಯ ನ್ಯಾಯತೀರ್ಪಿನಲ್ಲಿ ಭಕ್ತರನ್ನು ತೊಡಗಿಸುತ್ತಾನೆ ಎಂಬುದು ಇಲ್ಲಿ ವಿಷಯವಲ್ಲ. ಅವರು ಲೋಕಕ್ಕೆ ನ್ಯಾಯತೀರ್ಪನ್ನು ನೀಡುವಾಗ ಅವರು ಸಹ ಭಾಗವಹಿಸುತ್ತಾರೆ ಎಂಬುದನ್ನು ಸರಳವಾಗಿ ನೀಡಲಾಗಿದೆ.

ಎರಡನೆಯದಾಗಿ, ಪೌಲನು ದೊಡ್ಡದರಿಂದ ಸಣ್ಣದಕ್ಕೆ ತನ್ನ ವಾದವನ್ನು ನೀಡುತ್ತಾನೆ; ಅದೇನಂದರೆ, ದೇವರು ಲೋಕಕ್ಕೆ ನ್ಯಾಯತೀರ್ಪನ್ನು ನೋಡುವಾಗ, ಕ್ರೈಸ್ತರನ್ನು ನೋಡಿದ್ದಲ್ಲಿ, ಖಂಡಿತವಾಗಿ ಅವರು ಕೆಳಗಿನ ವಿಷಯಗಳಿಗೆ ನ್ಯಾಯತೀರ್ಪನ್ನು ನೀಡಲು ಶಕ್ತರಾಗಿದ್ದಾರೆ. ಕ್ರೈಸ್ತರು "ಹೊರಗಿನವರಿಗೆ ನ್ಯಾಯತೀರಿಸುವ" ಜವಾಬ್ದಾರಿಯನ್ನು ಪ್ರಸ್ತುತ ಯುಗದಲ್ಲಿ ಹೊಂದಿರುವದಿಲ್ಲ; ಅವರು "ಸಭೆಯ ಒಳಗೆ ಇರುವವರಿಗೆ ನ್ಯಾಯತೀರಿಸಬೇಕು" (5:12). ಕರ್ತನು ತಿರುಗಿ ಬರುವಾಗ ಮತ್ತು ಈಡೀ ಮಾನವ ಕುಲವು ದೇವರ ಎದುರಿನಲ್ಲಿ ನ್ಯಾಯತೀರ್ಪಿಗಾಗಿ ನಿಲ್ಲುವಾಗ (2 ಕೊರಿಂಥ 5:10), ಕ್ರೈಸ್ತ ದೈವೀಕ ಜೀವಿಗಳು ಅದೇ ರೀತಿಯಲ್ಲಿ ಜನರಿಗೆ ನೋಹನನ ನೀತಿವಂತಿಕೆ ಜಲಪ್ರಳಯಕ್ಕೆ ಮುಂಚಿನ ಲೋಕಕ್ಕೆ ಸೂಚಿಸಿದ ಹಾಗೆ ನ್ಯಾಯವನ್ನು ತೀರಿಸುತ್ತಾರೆ (ಇಬ್ರಿಯ 11:7).

ಪೌಲನು ಮುಂದಕ್ಕೆ ಕೇಳುತ್ತಾನೆ, **ಲೋಕವು ನಿಮ್ಮಿಂದ ನ್ಯಾಯತೀರ್ಪನ್ನು ಹೊಂದುವದಾದರೆ, ನೀವು ಅತ್ಯಲ್ಪ ಸಂಗತಿಗಳ ಕುರಿತು ತೀರ್ಪುಮಾಡುವದಕ್ಕೆ ಅಯೋಗ್ಯರಾಗಿದ್ದೀರೋ?** ಲೋಕಕ್ಕೆ ತೀರ್ಪುನೀಡುವದರಲ್ಲಿ ಭಕ್ತರು ಭಾಗವಹಿಸುವುದಾರೆ,

ಅವರು ಅತ್ಯಲ್ಪ ಸಂಗತಿಗಳ ನಿರ್ಣಯವನ್ನು ನೀಡುವದಕ್ಕೆ ಅರ್ಹರಾಗಿದ್ದಾರೆ ಎಂದು ಈ ಪ್ರಶ್ನೆಯು ಕಾರಣವನ್ನು ನೀಡುತ್ತದೆ. ಕೊರಿಂಥದವರು ತಮ್ಮೊಳಗಿರುವ ಕಲಹಗಳನ್ನು ಕ್ರೈಸ್ತ ಸಮುದಾಯದೊಳಗೆ ತಾವೇ ಪರಿಹರಿಸಿಕೊಳ್ಳಬೇಕು. ಭಿನ್ನತೆಯ ಇಂಥಹ ತೀರ್ಮಾನಗಳು ಬಹಳ ಮಟ್ಟಿಗೆ ನ್ಯಾಯವಾಗಿರುತ್ತವೆ.

**ವಚನ 3.** ಮಾನವ ಕುಲವು ದೇವರ ಅಂತಿಮ ನ್ಯಾಯತೀರ್ವಿಕೆಯನ್ನು ವಿಶ್ವಾಸಿಗಳ ದೈವೀಕ ಜೀವಿತವನ್ನು ಸಾಕಷ್ಟು ಶಾಂತರೀತಿಯಲ್ಲಿ ಸಹಿಸುಕೊಳ್ಳುತ್ತದೆ, ಆದರೆ ಪೌಲನು ಭಕ್ತರ ಕುರಿತಾಗಿ ನ್ಯಾಯಾಧಿಪತಿಯ ಹೆಚ್ಚಿನ ಗೌರವ ಇನ್ನೂ ಮುಂದಕ್ಕೆ ನಡೆಯುತ್ತದೆ ಎಂದು, ಮೊದಲನೆಯ ವ್ಯಕ್ತಿಯೆಡೆಗೆ ಸ್ಥಳಾಂತರಿಸುತ್ತಾ ಪೌಲನು **ನಾವು ದೇವದೂತರಿಗೂ ತೀರ್ಪುಮಾಡುವೆವೆಂದು ನಿಮಗೆ ಗೊತ್ತಿಲ್ಲವೋ?** ಎಂದು ಅಪೊಸ್ತಲನು ಕೇಳುತ್ತಾನೆ. 2 ಪೇತ್ರ 2:4 ಮತ್ತು ಯೂದ 6 ಎರಡೂ ವಚನಗಳು ಪಾಪಮಾಡಿದ ದೇವದೂತರ ಕುರಿತಾಗಿ ಮಾತನಾಡುತ್ತವೆ. ಕೆಲವು ದೇವದೂತರ ಪಾಪಮಾಡಿದ್ದಾರೆ ಎಂಬುದರ ಕುರಿತು ವೇದವಾಕ್ಯವು ಸ್ವಲ್ಪ ಮಾಹಿತಿಯನ್ನು ನೀಡುತ್ತದೆ ಮತ್ತು ಅವರೂ ಸಹ ಜನರಂತೆ ತಮ್ಮ ತಪ್ಪಾದ ನಡತೆಗೆ ಉತ್ತರವನ್ನು ನೀಡಬೇಕು. ವಿಶ್ವಾಸಿಗಳಿಂದ ತೀರ್ಪನ್ನು ಹೊಂದುವ ದೇವದೂತರ ಕುರಿತು ಉಲ್ಲೇಖಿಸುವಾಗ, ಪೌಲ, ಪೇತ್ರ ಮತ್ತು ಯೂದ ಸೈತಾನನ ಕುರಿತು ಯಾವ ಉಲ್ಲೇಖವನ್ನು ನೀಡುವದಿಲ್ಲ.

"ಲೋಕದ" ಅಥವಾ "ದೇವದೂತರ" ಸಂಕ್ಷಿಪ್ತವಾದ ತೀರ್ಪಿನಲ್ಲಿ ಕ್ರೈಸ್ತರ ಸಂಕ್ಷಿಪ್ತ ಪಾತ್ರ ನಿರ್ಧಿಷ್ಟವಾಗಿಲ್ಲ. ಪೌಲನು ಖಂಡಿತವಾಗಿ ದೇವರು ತನ್ನ ಸ್ವಂತ ತೀರ್ಪು ಮಾನವ ನ್ಯಾಯಾಧಿಪತಿಗಳ ತೀರ್ಪಿಗಿಂತ ವ್ಯತ್ಯಾಸವಾಗಿದ್ದಲ್ಲಿ ಅವರ ತೀರ್ಪನ್ನು ಮುಂದುಡೂತ್ತಾನೆ ಎಂದು ಖಂಡಿತವಾಗಿ ಪೌಲನ ಅರ್ಥವಲ್ಲ. ಹೆಚ್ಚು ಸಮಂಜಸವಾಗಿ, ಕ್ರೈಸ್ತರ ನಂಬಿಗಸ್ತ ಜೀವಿತಗಳು ದೇವದೂತರ ಪಾಪಗಳ ಮೇಲೆ ಹಾಕುವ ಅದೇ ರೀತಿಯಲ್ಲಿ ಅವರ ಉತ್ತಮವಾದ ಜೀವಿತಗಳು ತಮ್ಮ ತೀರ್ಪನ್ನು ದೈವೀಕವಲ್ಲದ ಜನರ ಪಾಪಗಳ ಮೇಲೆ ಹಾಕುತ್ತಾರೆ (ನೋಡಿರಿ ಮತ್ತಾಯ 19:28; ಇಬ್ರಿಯ 11:7). ದೇವದೂತರ ಕುರಿತು ಅಪೊಸ್ತಲನ ಉಲ್ಲೇಖಗಳು 6:2ರಲ್ಲಿರುವ ಪ್ರಶ್ನೆಯನ್ನು ಬಲಪಡಿಸುತ್ತದೆ. ಅವರ ಸ್ವಂತ ಜನರು **ಈ ಜೀವಿತದ ವಿಷಯದ** ಕುರಿತು ಗಲಿಬಿಲಿಯನ್ನು ಹೊಂದಿರುವಾಗಲೂ ಸಹ ಕೊರಿಂಥದ ಕ್ರೈಸ್ತರು ನ್ಯಾಯತೀರ್ಪಿನಲ್ಲಿ ಕೂತುಕೊಳ್ಳಲು ಅರ್ಹರಾಗಿರುತ್ತಾರೆ.

## ಮೊಕದ್ದಮೆಗಳು ಅವಿಶ್ವಾಸಿಗಳಿಗಾಗಿ (6:4-8)

**4ಐಹಿಕ ಜೀವಸಂಬಂಧದಲ್ಲಿ ನಿರ್ಣಯಿಸತಕ್ಕ ಕಾರ್ಯಗಳು ನಿಮ್ಮಲ್ಲಿದ್ದರೆ ತೀರ್ಪುಮಾಡುದಕ್ಕೆ
ಸಭೆಯಲ್ಲಿ ಗಣನೆಗೆ ಬಾರದವರನ್ನು ಕುಳ್ಳಿರಿಸಿಕೊಳ್ಳುತ್ತೀರೋ? 5ನಿಮ್ಮಲ್ಲಿ ನಾಚಿಕೆ
ಹುಟ್ಟಿಸುವದಕ್ಕೆ ಇದನ್ನು ಹೇಳುತ್ತೇನೆ. ಏನು, ತನ್ನ ಸಹೋದರರ ಮಧ್ಯದಲ್ಲಿ ನ್ಯಾಯವನ್ನು
ಬಗೆಹರಿಸಬಲ್ಲವನಾದ ಜಾಣನು 6ನಿಮ್ಮಲ್ಲಿ ಒಬ್ಬನಾದರೂ ಇಲ್ಲವೋ? ಸಹೋದರನು
ಸಹೋದರನ ಮೇಲೆ ವ್ಯಾಜ್ಯಮಾಡುದು ಅಲ್ಲದೆ ಅದನ್ನು ಕ್ರಿಸ್ತ ಭಕ್ತರಲ್ಲದವರ ಮುಂದೆ
ತೆಗೆದುಕೊಂಡು ಹೋಗುವದು ಸರಿಯೋ? ನಿಮ್ಮ ನಿಮ್ಮಲ್ಲಿ ವ್ಯಾಜ್ಯಮಾಡುವದೇ ನೀವು
ಸೋತವರೆಂಬದಕ್ಕೆ ಗುರುತು. 7ಅದಕ್ಕಿಂತ ಅನ್ಯಾಯವನ್ನು ಯಾಕೆ ಸಹಿಸಬಾರದು? ಆಸ್ತಿಯ
ನಷ್ಟವನ್ನು ಯಾಕೆ ತಾಳಬಾರದು? 8ಆದರೆ ನೀವು ಅನ್ಯಾಯಮಾಡುತ್ತೀರಿ; ಆಸ್ತಿಯನ್ನು**

**ಅಪಹರಿಸುತ್ತೀರಿ; ಸಹೋದರರಲ್ಲಿಯೇ ಹೀಗೆ ಮಾಡುತ್ತೀರಿ.**

**ವಚನ 4.** ಪೌಲನ ಅಲಂಕಾರಿಕ ಪ್ರಶ್ನೆ ಲೋಕದ ಗಲಭೆಗಳನ್ನು ಪ್ರಾಪಂಚಿಕ ನ್ಯಾಯಾಲಯಕ್ಕೆ ಒಯ್ಯುವ ಭಕ್ತರ ಅಸಂಭದ್ದತೆಗೆ ಒತ್ತನ್ನು ನೀಡುವತ್ತ ಮುಂದುವರೆಯುತ್ತದೆ. **ಈ ಐಹಿಕ ಜೀವಸಂಬಂಧದಲ್ಲಿ** (βιωτικά, *biōtika*) ಒಬ್ಬನ ಜೀವಿತಕ್ಕೆ ಅಥವಾ ಪರಸ್ಪರ ಸಂಬಂಧದ ಅವಶ್ಯಕತೆಗಳನ್ನು ಒದಗಿಸುವದಾಗಿದೆ. ಸಂಪತ್ತಿನ ರೇಖೆ, ವ್ಯಾಪಾರದ ಸ್ಥಳದಲ್ಲಿ ಕೊಟ್ಟಿರುವ ಅಂಗಡಿ, ಸಾಲವನ್ನು ತೀರಿಸುವದು ಅಥವಾ ಒಪ್ಪಿಕೊಂಡ ವೇತನಗಳು ಗೊಂದಲದಲ್ಲಿ ಸಿಕ್ಕಿಸುತ್ತವೆ ಇಲ್ಲವೇ ಗುರಿ ಇಟ್ಟುಕೊಂಡಿರುವ ಜನರನ್ನು ಸಭೆಗೆ ತರುತ್ತೇವೆ. ಇಂಥಹ ಹೋರಾಟಗಳು ಕೋಪ ಮತ್ತು ಕಹಿಭಾವನೆಯಲ್ಲಿ ವಿಸ್ತರಿಸುತ್ತವೆ. ವಿಶ್ವಾಸಿಗಳು ತಮ್ಮ ಮಧ್ಯದಲ್ಲಿರುವ ವ್ಯತ್ಯಾಸವನ್ನು ಪರಿಹರಿಸಿಕೊಳ್ಳಲು ಭ್ರಷ್ಟಾಚಾರ ಮತ್ತು ಮುಖಸ್ತುತಿಗೆ ಒಳಗಾಗಿರುವ ಪ್ರಾಪಂಚಿಕ ನ್ಯಾಯಾಲಯಗಳ ಮೇಲೆ ಆತುಕೊಳ್ಳುವಾಗ ಸಭೆಯ ಅನ್ಯೋನ್ಯತೆ ಮತ್ತು ಐಕ್ಯತೆ ನಾಶವಾಗುತ್ತದೆ.

ಪೌಲನು ವಿಶ್ವಾಸಿಗಳ ಮಧ್ಯದಲ್ಲಿ ಉದ್ಭವಿಸುವ ಜಗಳಗಳನ್ನು ಕಡಿಮೆ ಮಾಡುತ್ತಿಲ್ಲ, ಇಲ್ಲವೇ ಆತನು ಇಂಥಹ ಜಗಳಗಳನ್ನು ಯಾವಾಗಲೂ ಖಂಡಿತವಾಗಿ ಸರಿ ಅಥವಾ ತಪ್ಪಾದ ವಿಷಯಗಳು ಎಂದು ಯಾವಾಗಲೂ ಪರಿಹರಿಸಬಹುದೆಂದು ಸಲಹೆಯನ್ನು ನೀಡುತ್ತಿಲ್ಲ. ಅವನು ಸಭೆಯಲ್ಲಿರುವ ಗೌರವಾನ್ವಿತ ಜನರು ಪ್ರಾಪಂಚಿಕ ನ್ಯಾಯಾಧಿಪತಿಗಳಂತೆ ಎಲ್ಲಾ ಗುಂಪುಗಳು ಸ್ವೀಕರಿಸುವಂತೆ ಹೆಚ್ಚು ನ್ಯಾಯಯುತವಾದ ನಿರ್ಧಾರಗಳನ್ನು ನೀಡುವ ಸಾಧ್ಯತೆಯಿದೆ ಎಂದು ಅವನು ಹೇಳುತ್ತಾನೆ. NIV 1984 ಅಲಂಕಾರಿಕ ಪ್ರಶ್ನೆಯಾಗಿ ವಚನ 4ರಲ್ಲಿ ಇದನ್ನು ನೀಡುವದಿಲ್ಲ. καθίζετε (*kathizete*, "appoint") ಆಜ್ಞೆಯಾಗಿ ತೆಗೆದುಕೊಳ್ಳುತ್ತಾ, ಅದು ಈ ಅನುವಾದವನ್ನು ನೀಡುತ್ತದೆ, "ಐಹಿಕ ಜೀವಸಂಬಂಧದಲ್ಲಿ ನಿರ್ಣಯಿಸತಕ್ಕ ಕಾರ್ಯಗಳು ನಿಮ್ಮಲ್ಲಿದ್ದರೆ ತೀರ್ಪುಮಾಡುದಕ್ಕೆ ಸಭೆಯಲ್ಲಿ ಗಣನೆಗೆ ಬಾರದವರನ್ನು ಕುಳ್ಳಿರಿಸಿಕೊಳ್ಳಿರಿ." ಇದರ ಅರ್ಥ ಕ್ರೈಸ್ತರು ಒಬ್ಬರಿಗೆ ವಿರೋಧವಾಗಿ ಇನ್ನೊಬ್ಬರು ಪ್ರಾಪಂಚಿಕ ನ್ಯಾಯಾಲಯಗಳಿಗೆ ಹೋಗುವದಕ್ಕಿಂತ ಸಭೆಯು ತನ್ನ ಸದಸ್ಯರಲ್ಲಿ ಗಣನೆಗೆ ಬಾರದ ಯೋಗ್ಯ ಸದಸ್ಯರನ್ನು ನ್ಯಾಯಾಧಿಪತಿಗಳಾಗಿ ನೇಮಿಸಲು ಉತ್ತಮವಾದ ಪ್ರಯತ್ನವನ್ನು ಮಾಡುತ್ತದೆ. ಅವರಲ್ಲಿ ಗಣನೆಗೆ ಬಾರದವರು ಸಹ ಪ್ರತಿನಿತ್ಯದ ಜೀವಿತಕ್ಕೆ ಸಂಬಂಧಿಸಿದ ಜಗಳಗಳನ್ನು ಅವಿಶ್ವಾಸಿಗಳಿಗಿಂತ ಹೆಚ್ಚು ಸಮಂಜಸವಾಗಿ ಪರಿಹರಿಸುತ್ತಾರೆ. NIV 1984ರ ಅನುವಾದವು NASB ಗಿಂತ ಉತ್ತಮವಾಗಿದೆ ಎಂಬುದನ್ನು ನಿರ್ಧರಿಸುವದು ಕಠಿಣವಾಗಿದೆ. ಎರಡೂ ಸನ್ನಿವೇಶಕ್ಕೆ ಉತ್ತಮವಾಗಿ ಹೊಂದಿಕೊಳ್ಳುತ್ತವೆ, ಆದರೆ ಮೊದಲಿನದು ಪೌಲನು ತನ್ನ ಶೋತ್ರುಗಳನ್ನು ವಯಕ್ತಿಕ ಸಂಗತಿಗಳನ್ನು ಸಭೆಯ ಒಳಗೆ ಪರಿಹರಿಸಿಕೊಳ್ಳಬೇಕು ಎಂದು ಎಚ್ಚರಿಸಿರುವ ಓದುಗರ ನಿರೀಕ್ಷೆಗೆ ಉತ್ತಮವಾಗಿ ಹೊಂದಿಕೊಳ್ಳುತ್ತದೆ.

**ವಚನ 5.** ಕೊರಿಂಥದವರು ಸಹೋದರರ ಮಧ್ಯದಲ್ಲಿರುವ ನ್ಯಾಯಗಳನ್ನು ಬಗೆಹರಿಸುವಲ್ಲಿ ಜಾಣತನದ ತೀರ್ಪನ್ನು ನೀಡಲು ಅಸಮರ್ಥರಾಗಿದ್ದಾರೆ ಎಂದು ತೋರಿಸುವಾಗ ಅಪೊಸ್ತಲನಿಗೆ ಇದು ಹಾಸ್ಯಾಸ್ಪದವಾಗಿ ತೋರುತ್ತದೆ. ಪಂಗಡದವರ ಜಗಳದಲ್ಲಿ, ಅವರು ತಮ್ಮ ಸ್ವಂತ ಜ್ಞಾನವನ್ನು ಉನ್ನತಿಗೇರಿಸುವ ಅಭಿಪ್ರಾಯವನ್ನು

ಪ್ರದರ್ಶಿಸಿದ್ದಾರೆ (ನೋಡಿರಿ 3:18-20). ಸ್ವಂತಃ ಬೆಲೆಕಟ್ಟಿದ ಜ್ಞಾನದಿಂದ ಏನಾಯಿತು? ಅದು ಅವರ ತತ್ವಜ್ಞಾನಶಾಸ್ತ್ರದ ವಾದದಲ್ಲಿ ಏಕೆ ಅಷ್ಟೊಂದು ಸಮೃದ್ಧಿಯಾಗಿತ್ತು ಮತ್ತು ಪ್ರಾಯೋಗಿಕ ವಿಷಯಗಳಲ್ಲಿ ತಮ್ಮ ನ್ಯಾಯಗಳನ್ನು ಬಗೆಹರಿಸುವಲ್ಲಿ ಏಕೆ ಅಷ್ಟೊಂದು ಕಡಿಮೆಯಾಗಿತ್ತು? ಅಪೊಸ್ತಲನು ಜ್ಞಾವವನ್ನು ಸಭೆಯ ಜೀವಿತದಲ್ಲೂ ರೂಢಿಯಲ್ಲಿ ತರಬೇಕು ಎಂದು ಇಚ್ಛಿಸಿದ್ದನು.

ಪೌಲನು ಈ ವಿಶ್ವಾಸಿಗಳಲ್ಲಿ ನೋಡಿದ ಆತ್ಮೀಕ ವರಗಳು ಗಲಭೆಗಳು ಉದ್ಭವಿಸುವಾಗ ಉತ್ತಮವಾದ ತೀರ್ಪು ಅವರಿಗೆ ಮಾರ್ಗದರ್ಶನ ನೀಡುವದನ್ನು ನೋಡಿದ್ದನು. 12:28ರ ಅನುಗುಣವಾಗಿ ಕೆಲವರು ನಿಜವಾಗಿಯೂ "ಆಡಳಿತದ" (κυβέρνησις, *kubernēsis*) ವರವನ್ನು ಹೊಂದಿದ್ದರು. ಈ ಪದವು ಮಾರ್ಗದರ್ಶನ ನೀಡುವ ಸಾಮಥ್ರ್ಯವನ್ನು ಸೂಚಿಸುತ್ತದೆ, ಹಡಗಿನ ಚಾಲಕ ಹಡಗನ್ನು ಸುರಕ್ಷಿತ ತಾಣಕ್ಕೆ ನಡೆಸುವಂತೆ. ಇಂಥಹ ವರಗಳನ್ನು ಹೊಂದಿದವರು ಆ ಸನ್ನಿವೇಶಕ್ಕೆ ಏರಬೇಕು ಮತ್ತು ಕೊರಿಂಥದಲ್ಲಿರುವ ಸಭೆಯನ್ನು ಕಠಿಣ ಪರಿಸ್ಥಿತಿಯಲ್ಲಿ ನಡೆಸಬೇಕು. ಈ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಇಂತಹ ವರಗಳನ್ನು ಹೊಂದಿರುವ ಒಬ್ಬರ ನಿರಾಕರಣೆ ಅವರ ನಂಬಿಕೆಯನ್ನು ಪ್ರಶ್ನಿಸುವತ್ತ ನಡೆಸಿತು. ಸಭೆಗೆ ಅವಶ್ಯಕತೆಯಿರುವಾಗ ಜಾಣರಾದ ಸಹೋದರರು ತೀರ್ಪನ್ನು ನೀಡಲು ಹಿಂಜರಿಯಬಾರದು. ಒಂದುವೇಳೆ ಸಭೆಯಲ್ಲಿ ಜ್ಞಾನಿಗಳ ಕೊರತೆ ಇದ್ದಲ್ಲಿ ಅಥವಾ ಜ್ಞಾನಿಗಳಿಂದ ಮಾರ್ಗದರ್ಶನವನ್ನು ಪಡೆದುಕೊಳ್ಳಲು ನಿರಾಕರಿಸಿದ್ದಲ್ಲಿ, ಅದು ಅವರಲ್ಲಿ ನಾಚಿಕೆ ಹುಟ್ಟಿಸುವಂಥದ್ದಾಗಿದೆ.

**ವಚನ 6.** ಪರಿಸ್ಥಿತಿಗಳ ಕುರಿತು ಪೌಲನ ಹೇಳಿಕೆಯಲ್ಲಿ ಸಹೋದರರು ಸಹೋದರ ಮೇಲೆ ವ್ಯಾಜ್ಯಮಾಡುವುದಲ್ಲದೆ ಅದನ್ನು ಪ್ರಾಪಂಚಿಕ ನ್ಯಾಯಾಲಯಕ್ಕೆ ಕೊಂಡೊಯ್ಯುವದನ್ನು ಅವನು ಅಪನಂಬಿಕೆ ಎಂದು ಪ್ರತಿಕ್ರಿಯಿಸುತ್ತಾನೆ. ಸಮಸ್ಯೆಯು ಎರಡು ವಿಧದ್ದಾಗಿದೆ: ಜಾಣ ವಿಶ್ವಾಸಿಗಳು ತಮ್ಮನ್ನು ತಾವು ಹೇಡಿಗಳಾಗಿ ತೋರ್ಪಡಿಸುವದು ಮತ್ತು ಪ್ರಾಪಂಚಿಕ ಮನಸ್ಸಿನ ಕ್ರೈಸ್ತರು ಗೊಂದಲಗಳನ್ನು ಪರಿಹರಿಸಿಕೊಳ್ಳಲು ಸಂಧಾನಮಾಡಿಕೊಳ್ಳಲು ಸಿದ್ಧರಿಲ್ಲದವರು. ಇದರ ಪರಿಣಾಮ ಕೇವಲ ಸಭೆಯಲ್ಲಿ ಡಂಭಾಚಾರ ಮಾತ್ರವಲ್ಲ, ಅಲ್ಲದೇ ಸಾರ್ವಜನಿಕ ಅಗೌರವವಾಗಿದೆ: **ಸಹೋದರನು ಸಹೋದರನ ಮೇಲೆ ವ್ಯಾಜ್ಯ ವಾಡುವದಲ್ಲದೆ** ತಮ್ಮ ವ್ಯಾಜ್ಯವನ್ನು ಅವಿಶ್ವಾಸಿಗಳ ಮುಂದೆಯೂ ಹೋಗುತ್ತಾನೆ. ಅದರ ಮೂಲಕ, ಕ್ರೈಸ್ತರು ಸಾರ್ವಜನಿಕವಾಗಿ ತಮ್ಮಲ್ಲಿ ಜಾಣನು ಅಥವಾ ಇಂಥಹ ವಿಷಯಗಳ ನ್ಯಾಯವನ್ನು ತೀರಿಸಲು ನಂಬಿಗಸ್ತನು ಒಬ್ಬನೂ ಇಲ್ಲ ಎಂದು ತೋರಿಸುತ್ತಾರೆ. ಅವರು ತಮ್ಮನ್ನು ತಾವು ಕ್ರಿಸ್ತನನ್ನು ಅರಿಯುವ ಪೂರ್ವದಲ್ಲಿ ಇದ್ದಂಥ ಅದೇರೀತಿಯ ತಿಳುವಳಿಕೆಯುಳ್ಳ, ಸ್ವಾರ್ಥ-ಕೇಂದ್ರಿಕೃತ ಜನರೆಂದು ಪ್ರದರ್ಶಿಸುತ್ತಾರೆ. ದೇವರು ಅವರಿಂದ ಉತ್ತಮವಾದ ನಡತೆಯನ್ನು ನಿರೀಕ್ಷಿಸುತ್ತಾನೆ, ಅದರಂತೆ ಪೌಲನು ಸಹ.

**ವಚನ 7.** ಸಹೋದರರು ಪರಸ್ಪರ ವಿರೋಧವಾಗಿ ನ್ಯಾಯಕ್ಕಾಗಿ ವಿಗ್ರಹಾರಾಧಕ ಅಧಿಕಾರಿಗಳ ಮುಂದೆ ಹೋಗುವದು ಎಷ್ಟು ಶಾಂತಿಭಂಗಮಾಡುವಂತ ವಿಷಯವಾಗಿದೆ ಅದು ವಿಶ್ವಾಸಿಗಳ ಮಧ್ಯದಲ್ಲಿ ಇರಬೇಕಾದ ಸಂವಹನದ ಗುಣಲಕ್ಷಣಗಳನ್ನು ವಿವರಿಸಲೇಬೇಕಾದ ಧಾರಾಳತೆ ಮತ್ತು ಕ್ಷಮಾಪಣೆಗೆ ಅಗೌರವವನ್ನು ತೋರಿಸುವದಾಗಿದೆ.

ಸಭೆಯು ಜ್ಞಾನಿಗಳಿಗೆ ಮಾರ್ಗದರ್ಶನಕ್ಕಾಗಿ ನೀವೇದಿಸುವದರ ಮೂಲಕ ತನ್ನ ಸ್ವಂತ ಗಲಭೆಗಳನ್ನು ಪರಿಹರಿಸುವದರಲ್ಲಿ ಅವನತಿಗೆ ಇಳಿದಿರುವದಲ್ಲದೇ, ಅವರು ಸ್ವರ್ಧಾತ್ಮಕತೆಯನ್ನು ಸಹ ಪ್ರದರ್ಶಿಸುತ್ತಾರೆ. ಅವರಲ್ಲಿ ತಮ್ಮ ಲಾಭದ ದೃಷ್ಟಿಕೋನ ಇರುವವರೆಗೆ ಒಬ್ಬನೂ ಒಂದು ಚಿಕ್ಕ ವಿಷಯವನ್ನು ಸಹ ತ್ಯಜಿಸಲು ಸಾಧ್ಯವಿಲ್ಲ.

ಪೌಲನು ಹೇಳುತ್ತಾನೆ, **ನಿಮ್ಮ ನಿಮ್ಮಲ್ಲಿ ವ್ಯಾಜ್ಯಮಾಡುವದೇ ನೀವು ಸೋತವರೆಂಬದಕ್ಕೆ ಗುರುತು**. ಅವರು ಉತ್ತಮವಾಗಿ ನಡೆದುಕೊಳ್ಳಲು ಯೇಸು ಒಂದು ಮಾದರಿಯನ್ನು ಸ್ಥಾಪಿಸಿದನು. ಅವನು ಐಶ್ವರ್ಯವಂತನಾಗಿದ್ದರೂ ಸಹ, ಯೇಸು ಅವರು ಐಶ್ವರ್ಯವಂತರಾಗಬೇಕೆಂದು ಅವರಿಗಾಗಿ, ಬಡವನಾದನು (2 ಕೊರಿಂಥ 8:9), ನಿನ್ನ ವೈರಿ ನಿನ್ನ ಸಂಗಡ ವ್ಯಾಜ್ಯಮಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಯೇಸು ಹೇಳಿದ್ದು, ತನ್ನ ಹಿಂಬಾಲಕರು ನಿನ್ನ ಮೇಲಂಗಿಯನ್ನೂ ಸಹ ಕೊಡಬೇಕು (ಮತ್ತಾಯ 5:40) ಆತನು ಮತ್ತು ಹೇಳಿದ್ದೇನಂದರೆ, "ನಿನ್ನನ್ನು ಬೇಡುವವನಿಗೆ ಕೊಡು; ನಿನ್ನಲ್ಲಿ ಕಡಾ ಈಸಿಕೊಳ್ಳಬೇಕೆಂದು ಬಂದವನಿಗೆ ಮುಖತಿರುವಿಕೊಳ್ಳಬೇಡ" (ಮತ್ತಾಯ 5:42). ವಿಶ್ವಾಸಿಗಳು ವಿಶ್ವಾಸಿಗಳ ವಿರುದ್ಧ ಮೊಕದ್ದಮೆ ಹೂಡುವಾಗ, ಯಾವ ಪಂಗಡದವರೂ ಗೆಲ್ಲುವದಿಲ್ಲ.

ಯಾವಾಗ ಕ್ರೈಸ್ತರು ತನ್ನ ಸಹ ವಿಶ್ವಾಸಿ ತನಗೆ ಅನ್ಯಾಯಮಾಡಿದ್ದಾನೆ ಎಂದು ಗ್ರಹಿಸಿಕೊಳ್ಳುವಾಗ, ಒಂದು ಅಭಿಪ್ರಾಯವೆಂದರೆ ಅವನು ವಿಷಯವನ್ನು ತಳ್ಳಿಹಾಕಬೇಕು ಮತ್ತು ಅಪರಾಧವನ್ನು ಕ್ಷಮಿಸಬೇಕು. ಸಹೋದರನು ಸಾಮಾನ್ಯ ವೇತನಕ್ಕಿಂತ ಹೆಚ್ಚಿನ ವೇತನಕ್ಕಾಗಿ ಒತ್ತಾಯಪಡಿಸಿದ್ದಲ್ಲಿ, ಉತ್ತಮವಾದ ಕ್ರೈಸ್ತ ನಡತೆ ಎಂದರೆ ಅವನಿಗೆ ಹೆಚ್ಚಿನ ಮೊತ್ತವನ್ನು ನೀಡುವದು. ಅವನು ತಾನು ಅಳತೆ ಮಾಡಿದ ಮಿತಿಗಿಂತ ಕೆಲವು ಅಡಿಗಳಿಂದಾಚೆಗೆ ಆಸ್ತಿಯ ಬೇಡಿಕೆಯನ್ನಿಟ್ಟಿದ್ದಲ್ಲಿ, ಅವನಿಗೆ ಆ ಭೂಮಿಯನ್ನು ತೆಗೆದುಕೊಳ್ಳಲು ಬಿಡು ಎಂದು ಯೇಸು ಹೇಳುತ್ತಾನೆ. ನಿಖರವಾದ ನ್ಯಾಯವನ್ನು ಒತ್ತಾಯಪಡಿಸುವದರ ಬದಲಾಗಿ ಅದು ನಮಗೆ ಬಾಕಿಯಿದೆ ಎಂದು ನಾವು ನಂಬಬೇಕು, ಪೌಲನು, **ಅನ್ಯಾಯವನ್ನು ಯಾಕೆ ಸಹಿಸಬಾರದು? ಯಾಕೆ ಮೋಸಹೋಗಬಾರದು?**

ಈ ದಾರಾಳತೆಯ ಮಿತಿಗಳೇನು? ತಾಳ್ಮೆ ಮತ್ತು ಉದಾರತೆಯನ್ನು ದುರಾಶೆಯು ಜಯಿಸುವಾಗ ಏನು ಮಾಡಬೇಕು? ಒಳ್ಳೇತನ ಮತ್ತು ಉತ್ತಮವಾದ-ನಂಬಿಕೆಯ ವ್ಯಾಪಾರವು ಸೋತುಹೋಗುವಾಗ, ಸಭೆಯಲ್ಲಿ ಜ್ಞಾನಿಯಾದ ಮನುಷ್ಯನು ಹೆಜ್ಜೆಯನ್ನು ಮುಂದಕ್ಕೆ ಇಡಬೇಕು. ಅನ್ಯಾಯದ ಬೇಡಿಕೆಯನ್ನು ವಿಶ್ವಾಸಿಗಳ ಸಮುದಾಯದಲ್ಲಿಯೇ ಬಗೆಹರಿಸಬೇಕು. ಇಂಥಹ ಒಂದು ಕಾರ್ಯವಿಧಾನ ಆಧುನಿಕ ಕ್ರೈಸ್ತರಿಗೆ ಪ್ರಾಚೀನ ಕಾಲದಲ್ಲಿ ಇದ್ದಂತೆಯೇ ಯುಕ್ತವಾಗಿದೆ.

**ವಚನ 8.** ಪೌಲನ ತಿರಸ್ಕಾರ ಹೆಚ್ಚಾಗುವದಕ್ಕೆ ಕಾರಣವೇನು, ಕೊರಿಂಥದಲ್ಲಿರುವ ಕ್ರೈಸ್ತರು ಸ್ತಾನಿಕ ನಿಯಮಗಳ ಪರಿಭಾಷೆಯನ್ನು ಉದ್ದೇಶಪೂರ್ವಕವಾಗಿ ತಮ್ಮನ್ನು ತಾವು ಸಮೃದ್ಧಿಗೊಳಿಸಲು, ತಾವು ನ್ಯಾಯವನ್ನು ಆಚರಿಸುತ್ತೇವೆ ಎಂದು ತೋರಿಸಲು ಉಪಯೋಗಿಸುತ್ತಾರೆ. ವಿಶ್ವಾಸಿಗಳ ಮಧ್ಯದಲ್ಲಿ ಸಮಾಧಾನ ಮತ್ತು ಒಳ್ಳೇತನಕ್ಕಾಗಿ ತಾವು ತಪ್ಪಿತಸ್ಥರಾಗುವದಕ್ಕೆ ಸಹ ಸಿದ್ಧರಾಗಿದ್ದೇವೆ ಎಂದು ಪ್ರದರ್ಶಿಸುವದಕ್ಕೆ ಬದಲಾಗಿ, ಪೌಲನು, ನೀವೇ **ಅನ್ಯಾಯಮಾಡುತ್ತೀರಿ ಮತ್ತು ಮೋಸಮಾಡುತ್ತೀರಿ** ಎಂದು ದೂರುತ್ತಾನೆ.

ವಿಶ್ವಾಸಿಗಳು ಅವಿಶ್ವಾಸಿಗಳಾದ ಅಪರಾಧಿಗಳ ವಿರುದ್ದ ಅನ್ಯಾಯವನ್ನು ಮಾಡುವ ಮಟ್ಟಿಗೆ ತಮ್ಮ ಸ್ವಂತ ಲಾಭಕ್ಕೆ ಒತ್ತು ನೀಡಲು ಸಿದ್ಧರಾಗಿರುವದು ಬಹಳ ಕೆಟ್ಟದ್ದಾಗಿದೆ ಆದರೆ ಕೊರಿಂಥದಲ್ಲಿರುವ ಕೆಲವರು ತಮ್ಮ ನಂಬಿಕೆಯನ್ನು ಹಂಚಿಕೊಳ್ಳುವವರನ್ನು ಬಲಿಪಶುಗಳನ್ನಾಗಿ ಮಾಡುತ್ತಾರೆ.

ಪೌಲನು ಅಪರಾಧಿಗಳನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಾ ಹೇಳುವ ಧ್ವನಿಯನ್ನು ಕೇಳುವದು ಆಸಕ್ತಿಕರವಾಗಿದೆ, **ಇದನ್ನು ನೀವು ಸಹ ನಿಮ್ಮ ಸಹೋದರರಿಗೆ ಮಾಡಿರಿ.** ಐಕ್ಯತೆ ಮತ್ತು ಸಹೋದರತ್ವದ ವಿಶಿಷ್ಟವಾದ ಬಂಧನ ವಿಶ್ವಾಸಿಗಳ ಮಧ್ಯದಲ್ಲಿ ನೆಲೆಗೊಳ್ಳುತ್ತದೆ (ಗಲಾತ್ಯ 6:10). ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನು ಹಂಚಿಕೊಳ್ಳುವ ಇನ್ನೊಬ್ಬನಿಗೆ ಕ್ರೈಸ್ತರು ಅನ್ಯಾಯಮಾಡುವಾಗ, ದ್ವಿಗುಣವಾಗಿ ಖಂಡನಾರ್ಹವಾಗಿದೆ ಯಾಕಂದರೆ ಇದರಿಂದಾಗಿ ಸಂಪೂರ್ಣ ದೇಹವು ಕಷ್ಟಕ್ಕೆ ಇಡಾಗುತ್ತದೆ. ಪೌಲನು ಪಾಪವನ್ನು ಮತ್ತು ಅನ್ಯಾಯವನ್ನು ಎದುರಿಸುವದು ಕೆಲವೊಮ್ಮೆ ಹೆಚ್ಚು ಸಮಾಧಾನಕರವಾದ ವಿವೇಚನೆ ಮತ್ತು ಪ್ರಕೃತಿಸ್ವಭಾವಗಳನ್ನು ಉತ್ಪಾದಿಸುತ್ತದೆ. ಕೊರಿಂಥದವರು ಈ ವಿಷಯದಲ್ಲಿ ವರ್ತಿಸುತ್ತಿರುವ ರೀತಿಯಲ್ಲಿ ಯಾವುದೇ ಪಾತ್ರವನ್ನು ವಹಿಸಬಾರದೆಂದು ಅಪೊಸ್ತಲನು ಬಯಸುತ್ತಾನೆ. ಈ ಪ್ರತಿಕ್ರಿಯೆಯು ಕ್ರಿಸ್ತನ ದೇಹಕ್ಕೆ ವ್ಯತಿರಿಕ್ತವಾಗಿರುವದನ್ನು ಆತನು ನೋಡಿದ್ದಾನೆ.

## ನೀತಿವಂತರಿಗಾಗಿ ದೇವರ ರಾಜ್ಯ (6:9-11)

**9ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂಬದು ನಿಮಗೆ ತಿಳಿಯದೋ?
ಮೋಸಹೋಗಬೇಡಿರಿ, ಜಾರರು, ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು
ಪುರುಷಗಾಮಿಗಳು 10ಕಳ್ಳರು ಲೋಭಿಗಳು ಕುಡಿಕರು ಬೈಯುವವರು ಸುಲುಕೊಳ್ಳುವವರು
ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. 11ನಿಮ್ಮಲ್ಲಿ ಕೆಲವರು
ಅಂಥವರಾಗಿದ್ದೀರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ
ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು
ಹೊಂದಿದಿರಿ.**

**ವಚನ 9.** ಈ ಸಹೋದರರು ಪರಸ್ಪರರ ವಿರುದ್ಧ ನ್ಯಾಯಾಲಯಕ್ಕೆ ಹೋಗುವದು ಮತ್ತು ಸ್ವಪ್ರಯೋಜನಕ್ಕಾಗಿ ಸಹೋದರತ್ವದ ಪ್ರೀತಿ ಮತ್ತು ಐಕ್ಯತೆಯ ಬೆಲೆಯನ್ನು ನೀಡಿ ಪರಸ್ಪರರ ಮೇಲೆ ತಪ್ಪಿಹೊರಿಸುವದನ್ನು ಎಚ್ಚರಿಸಲಾಗಿದೆ. ಇದರಿಂದಾಗಿ ಯಾರೋಬ್ಬರು ತಮ್ಮ ವಿಷಯವನ್ನು ಚಿಕ್ಕ ಸಂಗತಿ ಎಂದು ದೃಷ್ಟಿಸುವದು ಬೇಡ, ಪೌಲನು ಈ ನಡತೆಯನ್ನು ಪೌಲನು ನಿಸ್ಸಂದೇಹವಾಗಿ ಪಾಪಗಳು ಎಂದು ಗುರುತಿಸಿದನು ಮತ್ತು ಒಟ್ಟುಗೂಡಿಸಿದನು. **ಜಾರರು, ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡಿಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ** "ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ" ಎಂಬುದನ್ನು ಆತನು ದೃಢಪಡಿಸಿದನು (6:10). ಅವನು ಅವರೊಂದಿಗೆ ಅನೀತಿವಂತರನ್ನು, ಯಾರು ಇತರರಿಗೆ ಉದ್ದೇಶಪೂರ್ವಕವಾಗಿ ಮೋಸಗೊಳಿಸಿತ್ತಾರೋ ಮತ್ತು ಸಮಾಧಾನಕ್ಕಾಗಿ ತಮ್ಮನ್ನು ತಾವು ಅನ್ಯಾಯವನ್ನು

ಸಹಿಸಿಕೊಳ್ಳಲು ಸಿದ್ಧರಾಗಿರುತ್ತಾರೋ ಅವರನ್ನು ಸಹ ಸೇರಿಸಿದನು.

ಪೌಲನು ಅಲಂಕಾರಿಕ ಪ್ರಶ್ನೆಯನ್ನು ಕೇಳುತ್ತಿದ್ದಾನೆ. “ಯಾರು ಕೆಟ್ಟತನದ ಸಂಪೂರ್ಣವಾದ ಮತ್ತು ಹವ್ಯಾಸಪೂರ್ವಕವಾದ ಅನೈತಿಕತೆ ಅಪರಾದಿ ಮನೋಭಾವವನ್ನು ಹೊಂದಿದ್ದಾರೋ ಅವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ ಎಂಬುದು ಬಹುಶಃ, ನಿಮಗೆ ತಿಳಿದದೆ. ಯಾರು ವಿಗ್ರಹಾರಾಧಕರ ಆಸ್ಥಾನಗಳಲ್ಲಿ ಅನ್ಯಾಯಮಾಡುತ್ತಾರೋ ಅವರು ಹೊರತಾಗಿಲ್ಲ.”

**ದೇವರ ರಾಜ್ಯ** ಎಂದರೇನು? ಈ ವಾಕ್ಯಾಂಗವು ಯೇಸುವಿನ ಕುರಿತಾಗಿ ಸಾರುವದಕ್ಕೆ ಮೂಲೆಗಲ್ಲಾಗಿದೆ ಮತ್ತು ಸುವಾರ್ತೆಯಲ್ಲಿ ಮೇಲಿಂದ ಮೇಲೆ ಕಂಡುಬಂದಾಗ್ಯೂ, ಯೋಹಾನನ ಸುವಾರ್ತೆಯಲ್ಲಿ ವಿರಳವಾಗಿ ಕಂಡುಬರುತ್ತದೆ (ಯೋಹಾನ 3:3, 5 ನೋಡಿರಿ). “ದೇವರ ರಾಜ್ಯ” ಅಪೊಸ್ತಲರ ಕೃತ್ಯಗಳಲ್ಲಿ ಅರ್ಧ ಡಜನ್‌ನಷ್ಟು ಸಾರಿ ಉಲ್ಲೇಖಿಸಲಾಗಿದೆ. ಪೌಲನು ಈ ವಾಕ್ಯಾಂಗವನ್ನು ಸಾಂದರ್ಭಿಕವಾಗಿ ಉಪಯೋಗಿಸುತ್ತಾನೆ, 1 ಕೊರಿಂಥದಲ್ಲಿ ಹೆಚ್ಚಾಗಿ ಬೇರೆ ಎಲ್ಲಿಯೂ ಇಲ್ಲ (4:20; 6:9, 10; 15:50).

ಒಂದು ಅರ್ಥದಲ್ಲಿ, ದೇವರ ರಾಜ್ಯವು ಇನ್ನೂ ಬರಲಿಕ್ಕಿದೆ. ಅದನ್ನು ನಂಬಿಗಸ್ತರೂ ಇನ್ನೂ ಬಾಧ್ಯವಾಗಿ ಹೊಂದಿಕೊಳ್ಳಬೇಕಾಗಿದೆ. ಕೊನೆಯ ದಿನಗಳಲ್ಲಿ ದೇವರ ರಾಜ್ಯವು ಸಂಪೂರ್ಣವಾಗಿ ಅರ್ಥವಾಗುತ್ತದೆ. ಇನ್ನೊಂದು ಅರ್ಥದಲ್ಲಿ, ದೇವರ ರಾಜ್ಯವು ಈಗಾಗಲೇ ಅಸ್ತಿತ್ವದಲ್ಲಿದೆ. ಎಲ್ಲೆಲ್ಲಿ ದೇವರ ಮಕ್ಕಳು ಇದ್ದಾರೋ ಅಲ್ಲಿ ಇದೆ (4:20; ಕೊಲಸ್ಸೆ 1:13 ನೋಡಿರಿ). ಪೌಲನು ಆ ದೇವರ ರಾಜ್ಯದ ಭಾಗವಾಗುವದು ಯಾರನ್ನೂ ನಿದ್ರೆಮಾಡುವದಕ್ಕೆ ಪ್ರೇರೆಪಿಸಬಾರದು ಎಂದು ಎಚ್ಚರಿಸುತ್ತಾನೆ. ಕ್ರೈಸ್ತರು ಯಾವಾಗಲೂ ಕಾಯ್ದಿರಿಬೇಕು; ಪಾಪ ಮತ್ತು ನಿತ್ಯಜೀವದ ಬಾಧ್ಯಸ್ಥತೆಗೆ ಯಾವುದೇ ರೀತಿಯ ಹೊಂದಾಣಿಕೆಯಿಲ್ಲ, ಈ ಕಾಲದಲ್ಲಿ ಅಥವಾ ಬರಲಿಕ್ಕಿರುವ ಸಮಯದಲ್ಲಿ. ಜಾಣತನದ ವಾದಗಳು ಪಾಪವನ್ನು ಹಗುರವಾಗಿ ಪರಿಗಣಿಸಲು ಕೆಲವರನ್ನು ಪ್ರೇರೆಪಿಸಬಹುದು, ಆದರೆ ಪೌಲನು ತನ್ನ ಓದುಗರಿಗೆ ನಿತ್ಯವಾದ ರಕ್ಷಣೆಗಿಂತ ಕಡಿಮೆ ಯಾವುದೂ ಅಪಾಯದಲಿಲ್ಲ ಎಂಬ ಭರವಸೆಯನ್ನು ನೀಡುತ್ತಾನೆ. ಅವನು ಪಟ್ಟಿಮಾಡಿದ ಎಲ್ಲಾ ನಡತೆಗಳು ಅದನ್ನು ಅಭ್ಯಾಸಮಾಡುವರೆಲ್ಲರನ್ನೂ ದೇವರ ರಾಜ್ಯದಿಂದ ಬೇರ್ಪಡಿಸುತ್ತವೆ.

ವಚನ 9ರಲ್ಲಿ ಉಲ್ಲೇಖಿಸಿದ ಐದು ಪಾಪಗಳಲ್ಲಿ, ನಾಲ್ಕು ಲೈಂಗಿಕ ಸ್ವರೂಪದ್ದಾಗಿವೆ. ಹಾದರ ಮತ್ತು ವ್ಯಭಿಚಾರ ವಿಜಾತಿಲೈಂಗಿಕತೆಯ ಪಾಪಗಳು; ಕೊನೆಯ ಎರಡು ಸಲಿಂಗಕಾಮಗಳು. ಹೊಸ ಒಡಂಬಡಿಕೆಯಲ್ಲಿ, “ಹಾದರ” ವಿವಾಹದಿಂದ ಹೊರಗೆ ಲೈಂಗೀಕ ಆತ್ಮೀಯತೆಗೆ ಸಾಮಾನ್ಯ ಪದವಾಗಿದೆ. ವ್ಯಭಿಚಾರ ಹೆಚ್ಚು ವಿಶಿಷ್ಟವಾಗಿ ವಿವಾಹಿತ ಪುರುಷ ಮತ್ತು ಮಹಿಳೆಯ ಮಧ್ಯದಲ್ಲಿ, ಇರುವ ಲೈಂಗೀಕ ಆತ್ಮೀಯತೆಯಾಗಿದೆ ಪರಸ್ಪರ ಮಧ್ಯದಲ್ಲಿ ಅಲ್ಲ. ಇಂಥಹ ವಿವಿಧ ವಿಧದ ಪಾಪಗಳನ್ನು ಕೊರಿಂಥದಲ್ಲಿ ರೂಢಿಯಲ್ಲಿದ್ದವು, ಧರ್ಮದ ಹೆಸರಿನಲ್ಲಿ ಸಹ. ಯೆಹೂದ್ಯರು ಹಕ್ಕುಳ್ಳವರಂತೆ ವಿಗ್ರಹಾರಾಧಕ ಲೋಕದ ಅನೈತಿಕತೆಯನ್ನು ಕಡೆಗಣಿಸುತ್ತಿದ್ದರು.

ಸಾಮಾನ್ಯ ಅರ್ಥದಲ್ಲಿ μαλακός (*malakos*, “effeminate”), ಎಂಬ ಪದ, ವಾಸ್ತವಿಕತೆಯಲ್ಲಿ, ಮೃದುವಾದ ಬಟ್ಟೆಗಳನ್ನು ಉಲ್ಲೇಖಿಸುತ್ತದೆ ಅಥವಾ ಸ್ಪರ್ಶಿಸಬಹುದಾದ

ಇತರ ವಸ್ತುಗಳನ್ನು. ಪದವು ಸಹಭಾಗಿಗಳಾಗಿರುವ ಯೌವನಸ್ಥ ಪುರುಷ ಮತ್ತು ಹುಡುಗರು ಅವರು ಸಿದ್ದರಿರಲಿ ಅಥವಾ ಸಿದ್ಧರಿಲ್ಲದಿರಲಿ, ಅವರು ಸಂಭಾವನೆ ಹೊಂದಿರಲಿ ಅಥವಾ ಸಲಿಂಗದ ಸಂಬಂಧಗಳಲ್ಲಿ ಒಮ್ಮತವಿರಲಿ ಉಪಯೋಗಿಸಲು ಪ್ರಾರಂಭಿಸಿದರು.[8] NIV "ಪುರುಷರೊಂದಿಗೆ ಲೈಂಗೀಕ ಸಂಬಂಧವನ್ನು ಹೊಂದಿರುವ ಪುರುಷರು" ಎಂದು ಅನುವಾದಿಸುತ್ತದೆ, ಪದವನ್ನು ಅತೀ ಕಿರಿದಾಗಿ ನಿರ್ಭಂದಿಸುತ್ತದೆ. ಇದು ಸಲಿಂಗಕಾಮಿಗಳಾದ ಪುರುಷ ಪ್ರದರ್ಶಿಸುತ್ತಿರುವ ಸ್ತ್ರೀಸ್ವಭಾವದ ಮಾರ್ಗಗಳನ್ನು ಉಲ್ಲೇಖಿಸಬಹುದು.

ಪೌಲನು ಸಹಜವಾಗಿ ಎರಡನೆಯ ಪದವನ್ನು ಸೃಷ್ಟಿಸುತ್ತಾನೆ, "ಸಲಿಂಗಕಾಮಿಗಳನ್ನು" (ἀρσενοκοίτης, *arsenokoitēs* from ἄρσην, *arsēn* "men," and κοίτη, *koitē*, "sexual promiscuity") ಎಂದು ಅನುವಾದಿಸುತ್ತಾನೆ. ಬಹುಶಃ ಅವನು ಯಾಜಕಕಾಂಡದಲ್ಲಿರುವ ಭಾಷೆಯನ್ನು LXX ನಲ್ಲಿ 18:23; 20:13; ತೆಗೆದುಕೊಂಡಿರಬಹುದು. ವೇದಾಭ್ಯಾಸದ ಕೆಲವು ಎಚ್ಚರಿಕೆಯ ಕಾರ್ಯಗಳ ನಂತರ David E. Malick ಅವರು ಎರಡು ಪದಗಳ ಕುರಿತು ಈ ನಿರ್ಧಾರಕ್ಕೆ ಬಂದಿದ್ದಾರೆ:

> ಅವರು ಸಲಿಂಗಕಾಮದ ಸಂಬಂಧಗಳಲ್ಲಿ ಕ್ರಿಯಾತ್ಮಕ ಮತ್ತು ನಿಷ್ಕ್ರೀಯ ಪಂಗಡಗಳನ್ನು ವರ್ಣಿಸುತ್ತಾರೆ. ಅವರ ಉಲ್ಲೇಖಗಳು [ಪುರುಷ ಮತ್ತು ಹುಡುಗನ ಮಧ್ಯದಲ್ಲಿರುವ ಸಂಬಂಧ] ದೂಷಣೆಯನ್ನು ಒಳಗೊಂಡಿವೆ, ಆದರೆ ಸಲಿಂಗ ಸಂಬಂಧಗಳನ್ನು ಇಬ್ರಿಯರ ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಉಲ್ಲೇಖಿಸಿರಬಹುದು. ವೇದವಾಕ್ಯಗಳು ಅದರಲ್ಲೂ ವಿಶೇಷವಾಗಿ ಯಾಜಕಕಾಂಡ 18:22 ಮತ್ತು 20:13.[9]

ಹಾಗೂ ಸಲಿಂಗಕಾಮದ ಆಧುನಿಕ ಧರ್ಮಪ್ರತಿಪಾದಕರು ಖಂಡಿಸುವದಕ್ಕೆ ಅಥವಾ ಮರಳಿ ಅರ್ಥೈಸುವದಕ್ಕೆ ಪ್ರಯತ್ನಿಸಿರಬಹುದು, ಅಪೊಸ್ತಲನು ಸಲಿಂಗಕಾಮವನ್ನು ಅಭ್ಯಾಸಿಸುವದು ಕ್ರೈಸ್ತರಿಗೆ ಯೋಗ್ಯವಲ್ಲದ ನಡತೆಯಾಗಿದೆ ಎಂದು ನಂಬುತ್ತಾನೆ.

ಕೆಲವು ಜನರು ಸಲಿಂಗಕಾಮದ ಒಲವಿನೊಂದಿಗೆ ಜನಿಸಿದ್ದಾಗಲೂ, ಕ್ರೈಸ್ತರ ದೃಷ್ಟಿಕೋನದಲ್ಲಿ ಅದನ್ನು ಅಭ್ಯಾಸಿಸುವದು ಸ್ವೀಕರಿಸಲು ಯೋಗ್ಯವಾಗಿಲ್ಲ. ಜನರು ಸ್ವಾರ್ಥತೆಯ, ಕಳ್ಳತನದ, ಮಾದಕದ್ರವ್ಯಗಳ ವ್ಯಸನದೊಂದಿಗೆ ಮತ್ತು ಇತರರಿಗೆ ಕೆಡುಕನ್ನು ಉಂಟುಮಾಡುವ ಒಲವಿನೊಂದಿಗೆ ಜನಿಸಿರುತ್ತಾರೆ. ಕ್ರೈಸ್ತ ನೈತಿಕತೆಯು ಹೆಚ್ಚಾಗಿ ಮಾನವನ "ಸಾಮಾನ್ಯ" ಒಲವುಗಳನ್ನು ನಿರ್ಭಂದಿಸುವದಾಗಿದೆ. Stanley J. Grenz ಅವರು ಇದನ್ನು ಉತ್ತಮವಾಗಿ ಹೇಳುತ್ತಾರೆ:

> [ನೈತಿಕತೆ] ಕೇವಲ ಸ್ವಾಭಾವಿಕವಾಗಿ ಬಂದಿರುವದನ್ನು ಮನ್ನಿಸುವದಲ್ಲ, ಆದಾಗ್ಯೂ ಕೆಲವು ಸಂಶೋಧಕರು ಪುರುಷರು ಸ್ವಾಭಾವಿಕವಾಗಿ ಬೆರಕೆಯಾಗಿರುತ್ತಾರೆ, ಇದು ಬಹಳ ಮಟ್ಟಿಗೆ ಸ್ವಾಭಾವಿಕವಾದ ಪ್ರವೃತ್ತಿಯಾಗಿದರ ಬಹುದು ಸತ್ಯವೇದ ನಿಷ್ಠೆಯ ನೈತಿಕತೆಯನ್ನು ಬದಿಗಿರಿಸುವದಿಲ್ಲ.[10]

ಅದೇ ರೀತಿಯಲ್ಲಿ, ಜನಿಸಿದಾಗಲೇ ಇರುವ ಸಲಿಂಗಕಾಮದ ಒಲವನ್ನು ರೂಢಿಯನ್ನು ಸಮರ್ಥಿಸುವದಿಲ್ಲ. ವಿಗ್ರಹಾರಾಧನೆಯನ್ನು ನಾಲ್ಕು ಲೈಂಗೀಕ ಪಾಪಗಳ ಪಟ್ಟಿಯಲ್ಲಿ

ಸೇರಿಸಿರುವದು ಪೌಲನಿಗೆ ಅನಿರೀಕ್ಷಿತವಾಗಿದೆ.

ಅವನು ಬಹಳ ಮಟ್ಟಿಗೆ ಏಕೆ ಹೀಗೆ ಮಾಡಿರಬಹುದೆಂದರೆ ಅನೈತಿಕತೆಯ ಆಚಾರಗಳು ಕೆಲವೊಮ್ಮೆ ವಿಗ್ರಹಾರಾಧಕರ ಧಾರ್ಮಿಕ ಹಬ್ಬಗಳೊಂದಿಗೆ ಸಂಬಂಧವನ್ನು ಹೊಂದಿರುತ್ತವೆ. ಹಳೆಒಡಂಬಡಿಕೆಯಲ್ಲಿ, ದೇವಾರ್ಪಿತವಾದ ವ್ಯಭಿಚಾರವು ಫಲವತ್ತತೆಯ ದೇವರುಗಳಾದ ಬಾಳ ಮತ್ತು ಸಂಗಾತಿಗಳಿಗೆ ಸಮರ್ಪಿಸುವದು ಆಳವಾಗಿ ಬೇರೂರಿದ ಅಂಶವಾಗಿತ್ತು. ಈ ಅಭ್ಯಾಸವು ನಿರ್ಧಿಷ್ಟವಾಗಿ ಅಸಹ್ಯಕರವಾಗಿತ್ತು ಯಾಕಂದರೆ ಗೌರವಾನ್ವಿತ ಯೆಹೂದ್ಯ ಪುರುಷರು ಮತ್ತು ಸ್ತ್ರೀಯರನ್ನು ಇದರಲ್ಲಿ ಎಳೆಯಲಾಗುತಿತ್ತು. “ಭ್ರಷ್ಟಳಾದ ಇಸ್ರಾಯೇಲು ಮಾಡಿದ್ದನ್ನು ನೋಡಿದಿಯಾ?” ಯೆರೆಮೀಯನು ಕೇಳುತ್ತಾನೆ. “ಅವಳು ಎತ್ತರವಾದ ಎಲ್ಲಾ ಗುಡ್ಡಗಳನ್ನು ಹತ್ತಿ ಸೊಂಪಾಗಿ ಬೆಳೆದಿರುವ ಎಲ್ಲಾ ಮರಗಳ ಕೆಳಗೆ ಹೋಗೆ ಸೂಳೆಯಾಗಿ ನಡೆದಳಷ್ಟೇ” (ಯೆರೆಮೀಯ 3:6). ಪ್ರವಾದಿಯು ಕೇವಲ ಅಲಂಕಾರಿಕವಾಗಿ ಮಾತನಾಡುತ್ತಿಲ್ಲ. ಅದರಂತೆ ಗ್ರೀಕ್‌ರು Dionysus ಮತ್ತು ಇತರ ದೇವತೆಗಳಿಗೆ ಮಧ್ಯೋತ್ಸವದ ಧರ್ಮವಿಧಿಗಳನ್ನು ಸರ್ಮಪಿಸುತ್ತಿದ್ದರು.

**ವಚನ 10.** ಅಪೊಸ್ತಲನು ಸಾಮಾನ್ಯವಾಗಿ ಪಾಪಗಳ ಪಟ್ಟಿಯನ್ನು ನೀಡುತ್ತಾನೆ, ಅವನು ಸಾಂಧರ್ಭಿಕವಾಗಿ ಮೌಲ್ಯಗಳನ್ನು ಸಹ ಪಟ್ಟಿಮಾಡಿದ್ದಾಗ್ಯೂ (ಗಲಾತ್ಯ 5:19-23). ಅವನು ಲೈಂಗೀಕ ಪಾಪಗಳನ್ನು ಜನರು ಒಬ್ಬರಿಗೊಬ್ಬರು ಮಾಡುವ ತಪ್ಪುಗಳು ಮತ್ತು ತಮ್ಮಷ್ಟಕ್ಕೆ ತಾವೇ ಮಾಡಕೊಳ್ಳುವ ಅಪರಾಧಗಳೆಡೆಗೆ ಮುನ್ನಡೆಯುತ್ತಾನೆ. **ಲೋಭ, ಕುಡಿಕತನ, ವೈರತ್ವ** ಮತ್ತು **ಸುಲುಕೊಳ್ಳುವವರು** ಮೊದಲಿನ ಪಟ್ಟಿಯಲ್ಲಿ ಸಹ ಇದ್ದಾರೆ (1 ಕೊರಿಂಥ 5:11). ಕಳ್ಳತನ ಲೋಭದ ಪರಿಣಾಮವಾಗಿರುವಂತೆ, ಕ್ರೈಸ್ತರ ಜೀವನ ಶೈಲಿ ದೇವಜನರ ಸಮುದಾಯ ಅಪ್ಪಿಕೊಂಡಿರುವ ನಂಬಿಕೆಯ ಹೊರಗೆ ಬೆಳೆಯುತ್ತದೆ. ಪೌಲನ ದೃಷ್ಟಿಯಲ್ಲಿ, ಅರಿಕೆಯನ್ನು ಜೀವನಶೈಲಿಯಿಂದ ಪ್ರತ್ಯೇಕಿಸಲಾಗುವದಿಲ್ಲ. ಒಬ್ಬನ ಕ್ರೈಸ್ತ ನಂಬಿಕೆಯನ್ನು ಅಭ್ಯಾಸಿಸುವದರಲ್ಲಿ ವಿಫಲರಾಗುವದರ ಪರಿಣಾಮ **ದೇವರ ರಾಜ್ಯವನ್ನು** ಕಳೆದುಕೊಳ್ಳುವದಾಗುತ್ತದೆ.

**ವಚನ 11.** ಪೌಲನು, ಯೇಸು ಕ್ರಿಸ್ತನ ಅಪೊಸ್ತಲನಾಗಿ, ತನ್ನ ಓದುಗರ ಮುಂದೆ ಪಾಪದ ಭಯಂಕರತೆಯನ್ನು ವಿಷಯವನ್ನು ವಿಮೋಚನೆಯತ್ತ ತಿರುಗಿ ತರದೇ ಇರುವದಿಲ್ಲ ಅವನು ತನ್ನ ಓದುರಿಗೆ ಅವರು ಶುದ್ದೀಕರಿಸಲ್ಪಟ್ಟಿದ್ದಾರೆ ಮತ್ತು ಯೇಸುವಿನ ಹೆಸರಿನಲ್ಲಿ ರಕ್ಷಣೆ ಹೊಂದಿದ್ದಾರೆ ಎಂದು ಜ್ಞಾಪಿಸುತ್ತಾನೆ. ಪೌಲನು ಸಹೋದರರು ಸಹೋದರ ವಿರುದ್ದವಾಗಿ ನ್ಯಾಯಾಲಯಕ್ಕೆ ಹೋಗುವದರ ಕುರಿತು ಜಿಗುಪ್ಸೆ ವುಳ್ಳವನಾಗಿದ್ದರೂ, ಅವನು ತನ್ನ ಓದುಗರಿಗೆ ಕ್ರಿಸ್ತನಲ್ಲಿರುವದು ಅವರಿಗೆ ಉತ್ತಮವಾದ ಮಾರ್ಗವನ್ನು ತೆರೆಯುತ್ತದೆ ಎಂಬುದನ್ನು ಜ್ಞಾಪಿಸುತ್ತಾನೆ. ಕೊರಿಂಥದಲ್ಲಿರುವ ಕ್ರೈಸ್ತರ ನಡತೆ ದುರಾಶೆಯ ಕಾರ್ಯಕ್ರಮ ಪಟ್ಟಿಯನ್ನು ಪ್ರದರ್ಶಿಸುತ್ತದೆ, ಆದರೆ ಅಪೊಸ್ತಲನು ಅವರಿಗೆ ಅವರ ಉತ್ತಮವಾದ ಸಹಜಪ್ರವೃತ್ತಿಯನ್ನು ವಿನಂತಿಸಿಕೊಳ್ಳುತ್ತಾನೆ. ಇದರೊಟ್ಟಿಗೆ ನಿತ್ಯಜೀವದಲ್ಲಿ ಬೇರೂರಬೇಕೆಂದು, ಅವರು ಲೋಕದಲ್ಲಿ ಸ್ವಗೌರವದ ತೃಪ್ತಿಕರವಾದ ಜೀವಿತಕ್ಕಾಗಿ ಕರೆಯಲ್ಪಟ್ಟಿದ್ದಾರೆಂದು ಹೇಳುತ್ತಾನೆ. ಪೌಲನು “ದೇವರು ಕ್ರೈಸ್ತರಿಗೆ ಪಾಪಮಯ ಇಚ್ಛೆಗಳನ್ನು ತುಳಿದುಹಾಕಲು ಸಾಕಷ್ಟು ಬಲವನ್ನು ನೀಡುತ್ತಾನೆ, ಅವರು ಅವುಗಳನ್ನು ಹೊಂದಿಕೊಳ್ಳುವದನ್ನು ಮುಂದುವರೆಸಿದ್ದಾಗಲೂ . . . ಕ್ರಿಸ್ತನ ವಿಶ್ವಾಸಿಗಳನ್ನು ಪಾಪಾಧೀನ

ಸ್ವಭಾವದಿಂದ ಬಿಡಿಸುತ್ತಾನೆ ಆದುದರಿಂದ ಅವರು ತಮ್ಮ ಕ್ರಿಯೆಗಳ ಕುರಿತು ಆಯ್ಕೆಯುಳ್ಳವರಾಗಿರುತ್ತಾರೆ" ಎಂದು ತಿಳಿದುಕೊಳ್ಳುತ್ತಾನೆ.[11]

ಸುವಾರ್ತೆಯ ಪರಿವರ್ತಿಸುವ ಬಲ ಅತ್ಯಂತ ಪಾಪಿಗಳಾದ ಪುರುಷರು ಮತ್ತು ಸ್ತ್ರೀಯರನ್ನು ಪರಿಶುದ್ಧರು ಮತ್ತು ದೇವರ ನೀತಿವಂತ ಮಕ್ಕಳಾಗಿ ಬದಲಾಯಿಸುತ್ತಾನೆ. ಮಾನವ ಕುಟುಂಬದಲ್ಲಿ ರಕ್ಷಣೆಯನ್ನು ತರಲು ದೇವರು ವಹಿಸಿದ ನೇತೃತ್ವ ಮತ್ತು ಮಹಿಮೆ ಹೊಂದಲು ರಕ್ಷಣೆಹೊಂದಿದವರ ಅಪ್ಪಿಕೊಳ್ಳಬೇಕಾದ ಜವಾಬ್ದಾರಿಗಳ ಮಧ್ಯದಲ್ಲಿ ಅಪೊಸ್ತಲನು ಅದ್ಭುತವಾದ ಸಮತೋಲನವನ್ನು ಕಾಪಾಡಿಕೊಳ್ಳುತ್ತಾನೆ. ಸಭೆಯ ಬಲವು ಪ್ರತಿಯೊಬ್ಬ ವಿಶ್ವಾಸಿಯ ಸರಳವಾದ ಪರಿಶುದ್ಧತೆ ಮತ್ತು ದೇವರ ಮೇಲಿರುವ ನಂಬಿಕೆಯ ಮೇಲೆ ಇದೆ.

ಕೆಲವು ವರ್ಷಗಳ ನಂತರ ಪೌಲನು ದೇವರಲ್ಲಿರುವ ಈ ವಿಶ್ವಾಸವನ್ನು ವ್ಯಕ್ತಪಡಿಸುತ್ತಾನೆ, ರೋಮದಲ್ಲಿರುವ ಸಭೆಯ ಒಬ್ಬ ಹಿರಿಯ, ದೇವರ ಒದಗಿಸುವ ಪೋಷಣೆಯ ಕುರಿತು ಹೀಗೆ ಬರೆಯುತ್ತಾನೆ. ಅವನು ಈ ಕೆಳಗಿನ ಪ್ರಾರ್ಥನೆಯನ್ನು ಕೊರಿಂಥದವರಿಗೆ ಬರೆದ ಪತ್ರದಲ್ಲಿ ನಿರೂಪಿಸುತ್ತಾನೆ, ಅದು ಮೊದಲನೆಯ ಶತಮಾನದ ಕೊನೆಯ ದಶಕದ ಸಮಯದ್ದಾಗಿದೆ:

> ನಾವು ಸೃಷ್ಟಿಯ ಮೂಲನಾದ ನಿನ್ನ ಹೆಸರಿನಲ್ಲಿ ನಮ್ಮ ನಿರೀಕ್ಷೆಯನ್ನು ನೆಲೆಗೊಳಿಸಲುಕರ್ತನೇ ನಮಗೆ ಅನುಗ್ರಹಿಸು ಮತ್ತು ನಾವು ನಿನ್ನನ್ನು ತಿಳಿದುಕೊಳ್ಳಲಿಕ್ಕಾಗುವಂತೆ ನಮ್ಮ ಹೃದಯದ ಕಣ್ಣುಗಳನ್ನು ತೆರೆ, ನಿನೊಬ್ಬನೇ ಉನ್ನತೋನ್ನದಲ್ಲಿ ವಾಸಿಸುವವನಾಗಿದ್ದೀ, ಪರಿಶುದ್ಧರಲ್ಲಿ ಪರಿಶುದ್ಧನಾಗಿದ್ದೀ; ಅಹಂಕಾರಿಗಳ ಅಹಂಕಾರವನ್ನು ಕುಗ್ಗಿಸುತ್ತೀ; ನೀನು ದೇಶಗಳ ಕಲ್ಪನೆಗಳನ್ನು ಚದುರಿಸುತ್ತೀ; ತಗ್ಗಿಸಲ್ಪಟ್ಟವರನ್ನು ಉನ್ನತಿಗೇ ಇಡುತ್ತೀ ಮತ್ತು ದುರಹಂಕಾರದವರನ್ನು ತಗ್ಗಿಸುತ್ತೀ; ಶ್ರೀಮಂತರನ್ನು ಬಡವರನ್ನಾಗಿಸುತ್ತೀ; ಸತ್ತವರನ್ನು ಜೀವಂತರನ್ನಾಗಿಸುತ್ತೀ; ನೀನೊಬ್ಬನೇ ಆತ್ಮವನ್ನು ಪೋಷಿಸುವವನಾಗಿದ್ದೀ ಮತ್ತು ಎಲ್ಲಾ ಮಾಂಸಧಾರಿಗಳ ದೇವರಾಗಿದ್ದೀ; ಅಧೋಲೋಕವನ್ನು ನೋಡುವವನಾಗಿದ್ದೀ, ಮಾನವನ ಕಾರ್ಯಗಳನ್ನು ಪರೀಕ್ಷಿಸುವವನಾಗಿದ್ದೀ; ಅಪತ್ತಿನಲ್ಲಿರುವವರಿಗೆ ಸಹಾಯಕನು, ನಿರಾಶೆಯಲ್ಲಿರುವವರಿಗೆ ರಕ್ಷಕನು; ಪ್ರತಿಯೊಂದು ಆತ್ಮಗಳ ಸೃಷ್ಟಿಕರ್ತನು ಮತ್ತು ಮೇಲ್ವಿಚಾರಕನೂ ಆಗಿದ್ದೀ, ನೀನು ಭೂಮಿಯ ಮೇಲೆ ಜನಾಂಗಗಳನ್ನು ದ್ವಿಗುಣಗೊಳಿಸುವನಾಗಿದ್ದೀ, ಮತ್ತು ಎಲ್ಲಾ ಮನುಷ್ಯರೊಳಗಿಂದ ಯೇಸು ಕ್ರಿಸ್ತನ ಮೂಲಕ ನಿನ್ನನ್ನು ಪ್ರೀತಿಸು ವವರನ್ನು ಆಯ್ದುಕೊಂಡಿದ್ದೀ, ಯಾರ ಮೂಲಕ ನಮಗೆ ಸೂಚನೆಗಳನ್ನು ನೀಡುತ್ತೀಯೋ, ಆ ನಿನ್ನ ಪ್ರೀತಿಯ ಮಗನು, ನಮ್ಮನ್ನು ಶುದ್ಧೀಕರಿಸಲಿ, ನಮ್ಮನ್ನು ಗೌರವಿಸಲಿ.[12]

ಸತ್ಯವೇದದ ತೊಳೆಯುವದು ಮತ್ತು ನೀರಿನ ಕುರಿತಾದ ದೀಕ್ಷಾಸ್ನಾನದ ಸನ್ನಿವೇಶದ ಅನೇಕ ಉಲ್ಲೇಖಗಳಲ್ಲಿ ದೀಕ್ಷಾಸ್ನಾನದಲ್ಲಿ ತೊಳೆಯಲ್ಪಡುವದರಲ್ಲಿ ಪೌಲನು ಮತ್ತು ಆತನ ಓದುಗರು ಜೊತೆಯಾಗಿದ್ದಾರೆ ಎಂಬುದನ್ನು ಸ್ಪಷ್ಟಗೊಳಿಸುತ್ತವೆ, ಪೌಲನು ಮುಂದುವರೆದು ಹೇಳುತ್ತಾನೆ. ನೀವು ಶುದ್ಧೀಕರಿಸಲ್ಪಟ್ಟಿದ್ದೀರಿ, **ಆದರೆ ನೀವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೀರಿ** (ಅ.ಕೃ. 22:16; ತೀತ 3:5 ನೋಡಿರಿ). ಇದೇ ಮಾರ್ಗವನ್ನು Wayne A. Meeks ಅವರು ತಮ್ಮ ಮಾತುಗಳಲ್ಲಿ ಹೇಳಿದ್ದಾರೆ:

> ಪರಿಶುದ್ಧವಾದ ಸಮುದಾಯವನ್ನು ಪ್ರವೇಶಿಸುವ ಎಲ್ಲರೂ "ತೊಳೆಯಲ್ಪಡಬೇಕು" ಮತ್ತು "ಶುದ್ಧೀಕರಿಸಲ್ಪಡಬೇಕು" ಮತ್ತು "ನೀತಿವಂತರೆಂಬ ನಿರ್ಣಯ" ವನ್ನು ಹೊಂದಬೇಕು

(1 ಕೊರಿಂಥ 6:11). ಇನ್ನೂ ಮುಂದಕ್ಕೆ, ಸಂಪೂರ್ಣ ಧರ್ಮವಿಧಿಯು ಸಾಯುವದನ್ನು ಮತ್ತು ಕ್ರಿಸ್ತನಲ್ಲಿ ಎದ್ದು ಬರುವದನ್ನು ಪ್ರತಿನಿಧಿಸುತ್ತದೆ . . . ಸ್ಪಷ್ಟವಾಗಿ, ಈಗ, ದೀಕ್ಷಾಸ್ನಾನವು ಧರ್ಮವಿಧಿಗಳನ್ನು ಸ್ಥಾಪಿಸುವದಕ್ಕೆ ಮೇರೆಯಾಗಿದೆ.[13]

ದೀಕ್ಷಾಸ್ನಾನದ ಹೊರಗಿನ ಕಾರ್ಯ ದೀಕ್ಷಾಸ್ನಾನದಲ್ಲಿ ನಾವು ಧೃಢೀಕರಿಸಿದ ಅಂತರಂಗದ ವರ್ತನೆಗಳಾದ ನಂಬಿಕೆ, ಪ್ರೀತಿ ಮತ್ತು ಅಧೀನತೆಯಿಂದ ಪ್ರತ್ಯೇಕಿಸಲಾಗುವದಿಲ್ಲ. ನೀರಿನಲ್ಲಿ ಮುಳುಗುವದು ಪಶ್ಚಾತ್ತಾಪದ ಆತ್ಮೀಕ ಸ್ವರೂಪದೊಂದಿಗೆ ಹೊಂದಿಕೆಯಾಗಿದೆ.

ಹಳೆ ಒಡಂಬಡಿಕೆಯ ಕುರಿತಾದ ಪೌಲನ ಆಳವಾದ ಬೇರುಗಳಿಂದಾಗಿ ಅವನು **ಕರ್ತನಾದ ಯೇಸು ಕ್ರಿಸ್ತನ** ಹೆಸರನ್ನು ಉಲ್ಲೇಖವಾಗಿ ತೋರಿಸಿದ್ದಾನೆ. "ಹೆಸರು" ಸ್ವತಃ ಕರ್ತನ ಹೆಸರಿನಲ್ಲಿ ನಿಲ್ಲುತ್ತದೆ. ರಕ್ಷಕನ ಹೆಸೆರಿನಲ್ಲಿ ಮೊರೆಯಿಡುವದರ ಮೂಲಕ ಪೌಲನು ಯೇಸುವು ತೊಳೆಯುವ, ಶುದ್ಧೀಕರಿಸುವ ಮತ್ತು ನೀತಿವಂತರೆಂದು ನಿರ್ಣಯಿಸುವ ದೂತನಾಗಿದ್ದಾನೆ ಎಂದು ಧೃಢೀಕರಿಸುತ್ತಾನೆ,[14] ಅವನ ಆತ್ಮನ ಮಧ್ಯವರ್ತಿ ಕಾರ್ಯವು ದೇವರು ಮತ್ತು ಆತನ ಜನರ ಮಧ್ಯದಲ್ಲಿರುವ ಬಂಧನವನ್ನು ಬಿಡಿಸುತ್ತದೆ. ಈ ಜನರು ಕ್ರಿಸ್ತನಲ್ಲಿ ಏನಾಗಿದ್ದಾರೋ ಅದು ಅವರು ಈ ಕಾಲದಲ್ಲಿ ದೇವರ ಮಕ್ಕಳಾಗಿ ಹೇಗಿದ್ದಾರೋ ಅದಕ್ಕಿಂತ ಒಟ್ಟಾರೆ ವಿಭಿನ್ನವಾಗಿದೆ. fee ಅವರು ಹೇಳುತ್ತಾರೆ, "ಪೌಲನಿಗೆ ಕೃಪೆಯ ಅನುಭವ ಮತ್ತು ಮತ್ತು ಆ ಕೃಪೆಯ ಅನುಭವಕ್ಕೆ ಸಾಕ್ಷಿಯಾಗಿರುವ ಒಬ್ಬನ ನಡತೆಯ ಮಧ್ಯದಲ್ಲಿ ನಿಕಟ ಸಂಬಂಧವಿರುವ ಸಾಧ್ಯತೆಯಿದೆ."[15]

## ಲೈಂಗೀಕ ಪಾಪಗಳನ್ನು ದೂರವಿರಿಸುವದು (6:12-20)[16]

ಪತ್ರವು ಸಾಂಪ್ರದಾಯಿಕವಾಗಿ ಪ್ರಬಂಧ ಪುಸ್ತಕಗಳ ಔಪಚಾರಿಕ ರಚನೆಯ ಕೊರತೆಯನ್ನು ಹೊಂದಿದೆ. ಒಂದು ಪತ್ರದಲ್ಲಿ ಲೇಖಕನು ಮೊದಲಿನ ಮತ್ತು ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ವಿಚಾರವನ್ನು ಅನಿಶ್ಚಿತವಾಗಿ ಸೇರಿಸಬಹುದು. ಅದನ್ನೇ ಸಹಜವಾಗಿ ಪೌಲನು 1 ಕೊರಿಂಥ 6ನೇ ಅಧ್ಯಾಯದ ಕೊನೆಯ ಭಾಗದಲ್ಲಿ ಮಾಡಿದ್ದಾನೆ. ಅವನು ಕೊರಿಂಥದಲ್ಲಿರುವ ಲೈಂಗೀಕ ಮೌಲ್ಯಗಳತ್ತ ಮತ್ತು ಕ್ರೈಸ್ತರ ಪ್ರತಿಕ್ರಿಯೆಯ ಕುರಿತು ಇಲ್ಲಿಯಷ್ಟೇ ತನ್ನ ಗಮನವನ್ನು ಏಕೆ ತಿರುಗಿಸುತ್ತಾನೆ? ತನ್ನ ತಂದೆಯ ಹೆಂಡತಿಯೊಂದಿಗೆ ಜೀವಿಸುತ್ತಿರುವ ಮನುಷ್ಯನೊಂದಿಗೆ ಅನ್ಯೋನ್ಯತೆಯಿಂದ ಇರುವ ವಿಷಯ ಮನಸ್ಸಿನಲ್ಲಿ ಇನ್ನೂ ಹಸಿಯಾಗಿರುವಾಗ (5:1), ಮತ್ತು ಹಾದರ ಮತ್ತು ವಿಗ್ರಹಾರಧನೆಯೊಂದಿಗೆ ಸಹೋದರನ ವಿರುಧವಾಗಿ ನ್ಯಾಯಾಲಯಕ್ಕೆ ಹೋಗುವದನ್ನು ಇದರೊಂದಿಗೆ ಸಮಾಂತರಗೊಳಿಸುತ್ತಾನೆ. ಸಭೆಯಲ್ಲಿ ಕೆಲವರು ದೇವರೊಂದಿಗೆ ತಮ್ಮ ಸಂಬಂಧವನ್ನು ಮತ್ತು ತಾವು ಯಾವುದನ್ನು ಹೆಚ್ಚಾಗಿ ದೈವೀಕ ಕಾರ್ಯವೆಂದು ಪರಿಗಣಿಸುತ್ತಾರೋ ಅದರಿಂದ ತಪ್ಪಿಸಿಕೊಳ್ಳಲು ಬಯಸುತ್ತಾರೆ. ಪೌಲನು ಈ ರೀತಿಯಲ್ಲಿ ಸಂಬಂಧ ಕಡಿದುಹಾಕುವದನ್ನು ಅನುಮತಿಸುವದಿಲ್ಲ. ಲೈಂಗೀಕ ಅನೈತಿಕತೆ, ವಿಚಿತ್ರವಾಗಿ ಬಲಹೀನಗೊಳಿಸುವ ಪಾಪವಾಗಿದೆ ಎಂದು ಪೌಲನು ವಾದಿಸುತ್ತಾನೆ. ಅದು ಯಾರು ಅದರಲ್ಲಿ ಮಾನಸಿಕವಾಗಿ ಆಳವಾದ ಹಂತದಲ್ಲಿ ತೊಡಗಿಸಿಕೊಳ್ಳುತ್ತಾರೋ ಅವರನ್ನು ಭ್ರಷ್ಟಗೊಳಿಸುತ್ತದೆ. ಅದು ದೇಹ, ಮನಸ್ಸು ಮತ್ತು ಆತ್ಮವನ್ನು ಸಂಪೂರ್ಣವಾಗಿ ಭ್ರಷ್ಟವಾದ ರೀತಿಯಲ್ಲಿ ವ್ಯಸ್ಥರನ್ನಾಗಿಸುತ್ತದೆ (6:18 ನೋಡಿರಿ).

ಸಮೃದ್ಧಿಯಾದ ಸಾಕ್ಷಿಗಳು ಪ್ರಾಪಂಚಿಕ ಗ್ರೀಕೋ-ರೋಮನ್ ಸಂಸ್ಕೃತಿಯಲ್ಲಿರುವ ನೈತಿಕತೆಯ ಹಂತವನ್ನು ಪ್ರದರ್ಶಿಸುತ್ತವೆ, ಅದರಲ್ಲೂ ನಿರ್ಧಿಷ್ಟವಾಗಿ ಕೊರಿಂಥದಲ್ಲಿ. ಸೂಳೆಗಾರಿಕೆ ವಿಶಾಲವಾಗಿ ರೂಢಿಯಲ್ಲಿತ್ತು, ಮಹಿಳಾ ಗುಲಾಮರ ದೇಹಗಳು ಅವರ ಯಜಮಾನರುಗಳಿಗೆ ಮೀಸಲಾಗಿದ್ದವು, ಸಲಿಂಗ ಕಾಮ ಹಾಸ್ಯವಾಗಿತ್ತು ಆದರೆ ಸಹಿಸಿಕೊಳ್ಳಲಾಗುತಿತ್ತು, ವಿಚ್ಛೇಧನವನ್ನು ಸ್ವೀಕರಿಸಲಾಗಿತ್ತು, ಮತ್ತು ಗರ್ಭಪಾತ ಮತ್ತು ಮಕ್ಕಳನ್ನು ಬಹಿರಂಗಪಡಿಸುವದು ಸಾಮಾನ್ಯವಾಗಿತ್ತು. ಅಪೊಸ್ತಲನು ಬಲವಾದ ಪದಗಳನ್ನು ಸೇರಿಸುವದಕ್ಕೆ ಒತ್ತಾಯಹೊಂದಿದನು ಮತ್ತು ಜಾಗತಿಕ ಲೈಂಗೀಕ ಅನೈತಿಕತೆಯಲ್ಲಿ ಕ್ರೈಸ್ತ ಪ್ರತಿಕ್ರಿಯೆಗೆ ಸ್ಪಷ್ಟವಾದ ಸ್ಥಾನವನ್ನು ತೆಗೆದುಕೊಂಡನು.

## ಪೌಲನ ವಿವರಣೆ (6:12-17)

ಅವಿಶ್ವಾಸಿಗಳ ಎದುರಿನಲ್ಲಿ ಸಹೋದರರು ಸಹೋದರರ ವಿರುಧವಾಗಿ ನ್ಯಾಯಾಲಯಕ್ಕೆ ಹೋಗುವದರ ಕುರಿತು ಪೌಲನ ಕೋಪ ಹೆಚ್ಚು ಸಾಮಾನ್ಯವಾದ ದುಷ್ಟತನದ ಕುರಿತು ಚರ್ಚಿಸುವತ್ತ ನಡೆಸುತ್ತದೆ. ಅವನು ಹಾದರಮಾಡುವವರು, ವಿಗ್ರಹಾರಾಧಕರು, ಕಳ್ಳರು ಮತ್ತು ವ್ಯಭಿಚಾರಿಗಳು (6:9, 10) ಅನ್ಯಾಯ ಮಾಡುವ ವ್ಯಾಜ್ಯ ತೀರಿಸುವವರನ್ನು ಆತನು ಪ್ರತ್ಯೇಕಿಸುತ್ತಾನೆ. ಯಾರು ಇಂಥಹ ಅಭ್ಯಾಸಗಳನ್ನು ಮಾಡುವದರಲ್ಲಿ ತೊಡಗಿಸಿಕೊಳ್ಳುತ್ತಾರೋ ಅವರಿಗೆ ನ್ಯಾಯತೀರ್ಪು ಕಾದಿದೆ; ಅವರಿಗೆ ದೇವರ ರಾಜ್ಯದಲ್ಲಿ ಸ್ಥಳವಿಲ್ಲ. ಹಿಂದಿನ ಕಾಲದಲ್ಲಿ ಕೊರಿಂಥದ ಕೆಲವು ಕ್ರೈಸ್ತರು ಇಂಥಹ ಮೋಸದಲ್ಲಿ ತೊಡಗಿಸಿಕೊಂಡಿದ್ದರು; ಆದರೆ ಅವರು ತೊಳೆಯಲ್ಪಟ್ಟರು ಶುದ್ಧೀಕರಿಸಲ್ಪಟ್ಟರು ಮತ್ತು ತೀರ್ಪನ್ನು ಹೊಂದಿದರು. ಗ್ರೀಕೋ ರೋಮನ್ ಲೋಕದ ಕಲಾಕೃತಿಗಳು ಜನರು ಲೈಂಗೀಕ ಚಟುವಟಿಕೆಗಳಲ್ಲಿ ವ್ಯಸ್ಥರಾಗಿದ್ದರು ಎಂಬುದನ್ನು ತೋರಿಸುತ್ತದೆ. ಕಲಾಕೃತಿಗಳು ಪ್ರಾಚೀನವಸ್ತು ಶಾಸ್ತ್ರಜ್ಞರಿಂದ ಭೂಮಿಯಿಂದ ತೆಗೆಯಲ್ಪಟ್ಟವು, ಚಿತ್ರಕಲೆ ಮತ್ತು ಸಾಹಿತ್ಯ ಅದೇ ಸಾಕ್ಷಿಯನ್ನು ನೀಡಿತು. ಆ ಸಮಯದಲ್ಲಿ ಜೀವಿಸುತ್ತಿದ್ದ ಜನರು ಈ ವಿಷಯದಲ್ಲಿ ವಿಶಿಷ್ಟವಾಗಿರಲಿಲ್ಲ, ಆದರೆ ಐತಿಹಾಸಿಕ ಅವಧಿಯಲ್ಲಿ ಅವರು ಇತರರಿಗಿಂತ ಹೆಚ್ಚಾಗಿ ಲೈಂಗೀಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಆಧುನಿಕ ಪಾಶ್ಚಿಮಾತ್ಯ ಲೋಕವು ಪ್ರಾಚೀನ ಗ್ರೀಕೋ-ರೋಮನ್ ಲೋಕದೊಂದಿಗೆ ವ್ಯವಸ್ಥಿತವಾಗಿ ವಿಕಲ್ಪಕ್ಕೆ ಅವಕಾಶವೀಯದ ಲೈಂಗೀಕ ಅಭ್ಯಾಸಗಳನ್ನು ಹಂಚಿಕೊಳ್ಳುತ್ತದೆ. ಪೌಲನು ಲೈಂಗೀಕ ಅನೈತೀಕತೆಯನ್ನು ಸಂಬೋಧಿಸುತ್ತಾನೆ, ಯಾಕಂದರೆ ಅದು ಎಲ್ಲಕ್ಕಿಂತಲೂ ಘೋರ ಪಾಪವೆಂಬುದಾಗಿ ಅಲ್ಲ ಬದಲಾಗಿ ಅದು ಸಂಸ್ಕೃತಿಯಲ್ಲಿ ವಿಶಾಲವಾಗಿ ಹರಡಿರುವ ಪಾಪವೆಂದು ಇದು ಸಮಾಜದ ವ್ಯವಸ್ಥೆಯಲ್ಲಿ ವಿನಾಶಕಾರಿಯಾಗಿರುವದರಿಂದ ಮತ್ತು ಜನರ ಒಳ್ಳೇದಕ್ಕಾಗಿದೆ.

**12ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ನನಗೆ ಸ್ವಾತಂತ್ರ್ಯವೇನೋ ಉಂಟು, ಆದರೆ ಎಲ್ಲವೂ ವಿಹಿತವಾಗಿರುವದಿಲ್ಲ. ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ನನಗೆ ಸ್ವಾತಂತ್ರ್ಯವುಂಟು ಆದರೆ ನಾನು ಯಾವುದಕ್ಕೂ ಒಳಗಾಗುವದಿಲ್ಲ. 13ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ, ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಅವೆ; ದೇವರು ಇದನ್ನು ಅವುಗಳನ್ನೂ ಕೂಡಾ ತೆಗೆದುಹಾಕುವನು. ಆದರೂ ದೇಹವು**

**ಹಾದರಕ್ಕೋಸ್ಕರ ಇರುವಂಥದಲ್ಲ. ಕರ್ತನಿಗೋಸ್ಕರವಾಗಿದೆ; [14]ಕರ್ತನು ದೇಹಕ್ಕೋಸ್ಕರ ಇದ್ದಾನೆ. ದೇವರು ಕರ್ತನನ್ನು ಎಬ್ಬಿಸಿದ್ದಲ್ಲದೆ ನಮ್ಮನ್ನೂ ತನ್ನ ಪರಾಕ್ರಮದಿಂದ ಎಬ್ಬಿಸುವನು. [15]ನಿಮ್ಮ ದೇಹಗಳು ಕ್ರಿಸ್ತನ ಅಂಗಗಳಾಗಿವೆ ಎಂಬುದು ನಿಮಗೆ ತಿಳಿಯದೋ? ಹೀಗಿರಲಾಗಿ ಕ್ರಿಸ್ತನ ಅಂಗಗಳಾಗಿರುವಂಥವುಗಳನ್ನು ತೆಗೆದುಬಿಟ್ಟು ಸೂಳೆಯ ಅಂಗಗಳಾಗಮಾಡಬಹುದೋ? ಎಂದಿಗೂ ಮಾಡಬಾರದು. [16]ಸೂಳೆಯ ಸಂಸರ್ಗ ಮಾಡುವವನು ಅವಳೊಂದಿಗೆ ಒಂದೇ ದೇಹವಾಗಿದ್ದಾನೆಂಬುದು ನಿಮಗೆ ತಿಳಿಯದೋ? ಗಂಡಹೆಂಡರಿಬ್ಬರೂ ಒಂದೇ ಶರೀರವಾಗಿರುವರೆಂದು ದೇವರು ಹೇಳುತ್ತಾನಲ್ಲಾ. [17]ಕರ್ತನ ಸಂಸರ್ಗಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ.**

**ವಚನಗಳು 12, 13.** ಕ್ರೈಸ್ತರು ತೊಳೆಯಲ್ಪಟ್ಟವರು ಮತ್ತು ಶುದ್ದೀಕರಿಸಲ್ಪಟ್ಟ ಜನರು ಎಂಬುದು ಅಪೊಸ್ತಲನ ವೀಕ್ಷಣೆ ಇದು ಅವನನ್ನು ಯಾರು ವಿಗ್ರಹಾರಾಧಕರ ಸಮಾಜದಲ್ಲಿ ಜಾಗತಿಕವಾದ ವಿಷಯಲಂಪಟತೆಯಲ್ಲಿ ತೊಡಗಿಸಿಕೊಂಡಿರುವದನ್ನು ಸಮರ್ಥಿಸುತಾರೋ ಅವರನ್ನು ಎದುರಿಸುವತ್ತ ನಡೆಸುತ್ತದೆ. **ನನಗೆ ಎಲ್ಲಾ ವಿಷಯಗಳು ನ್ಯಾಯಸಮ್ಮತವಾಗಿವೆ**, ಸ್ವಯಂಪ್ರೇರಿತ ಪ್ರಕಟನೆಗಳನ್ನು ತಿಳಿದುಕೊಳ್ಳುವದು ಕಠಿಣವಾಗಿದೆ. ಇಂಥಹ ವ್ಯವಹಾರವು ಪೌಲನ ಸಂಗತಿಯನ್ನು ಬೆಂಬಲಿಸುವದಿಲ್ಲ. NRSB ಮತ್ತು NIV (2011) ಯಂತ ಕೆಲವು ಅನುವಾದಗಳು, ವಚನ 12ರಲ್ಲಿರುವ ಮತ್ತು ಇನ್ನೊಂದು ವಚನ 13ರಲ್ಲಿರುವ ಈ ವ್ಯಾಕ್ಯಾಂಗಳನ್ನು ಆವರಣ ಚಿಹ್ನೆಯಲ್ಲಿ ನೀಡುತ್ತದೆ. ಹೀಗೆ ಮಾಡುವದರಿಂದ, ಅನುವಾದಕನು ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾನೆ ಅಪೊಸ್ತಲನು ಯಾರು ಲೈಂಗಿಕ ಬೆರಿಕೆಯನ್ನು ಸಮರ್ಥಿಸುತ್ತಾರೋ ಅವರು ಉಪಯೋಗಿಸುವ ಘೋಷಣೆಯೆಂದು ಉಲ್ಲೇಖಿಸುತ್ತಾನೆ.

ಪೌಲನು ಅವರ ಘೋಷಣೆಯನ್ನು ಉಲ್ಲೇಖಿಸುತ್ತಾ ಸ್ವಯಂ-ತೊಡಗಿಸಿಕೊಳ್ಳುವದಕ್ಕೆ ಪ್ರತಿಕ್ರಿಯಿಸುತ್ತಾನೆ ಆದರೆ ನಂತರ ಅದರ ತಪ್ಪನ್ನು ಪ್ರದರ್ಶಿಸುತ್ತಾನೆ: **ಆದರೆ ಎಲ್ಲವೂ ವಿಹಿತವಾಗಿರುವದಿಲ್ಲ.** “ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು” ಅವನು ಈ ಹಿಂದೆಯೇ ಇದನ್ನು ಬರೆದಿದ್ದಾನೆ (ಗಲಾತ್ಯ 5:1). ನಿಜವಾಗಿಯೂ, ಒಂದು ರೀತಿಯಲ್ಲಿ ಕ್ರೈಸ್ತರಿಗೆ “ಎಲ್ಲಾ ಸಂಗತಿಗಳೂ ನ್ಯಾಯವಾಗಿವೆ” ಆದರೆ ಯೇಸುವಿನ ಶಿಷ್ಯರು ಧರ್ಮಶಾಸ್ತ್ರಕ್ಕಿಂತ ಹೆಚ್ಚಾಗಿ ಪರಿಗಣಿಸಲ್ಪಟ್ಟಿದ್ದಾರೆ. ಅವನು ಯಾವುದು ಲಾಭದಾಯಕವಾಗಿದೆಯೋ, ಯಾವುದು ಕಟ್ಟುತ್ತದೋ, ಯಾವುದು ನಮ್ಮ ಜೀವಿತವನ್ನು ಸಮೃದ್ಧಿಗೊಳಿಸುತ್ತದೋ ಅದನ್ನು ಮಾಡಲು ಬಯಸುತ್ತಾನೆ. ಲೈಂಗೀಕ ಅನೈತಿಕತೆಯನ್ನು ನ್ಯಾಯವೆಂದು ಅಧೀನರಾಗದೇ, ಪೌಲನು, ಒಂದುವೇಳೆ ಅದು ನ್ಯಾಯಯುತವಾಗಿದ್ದರೂ, ಅದು ಲಾಭದಾಯಕವಲ್ಲ ಎಂಬುದನ್ನು ಎತ್ತಿ ತೋರಿಸುತ್ತಾನೆ. ಕ್ರೈಸ್ತ ವಿಧೇಯತೆಯ ಸ್ವರೂಪವನ್ನು ನೀಡುತ್ತಾ, ನಡತೆ ಲಾಭದಯಕತೆಯ ಪರೀಕ್ಷೆಯನ್ನು ಉತ್ತೀರ್ಣವಾಗದಿದ್ದಲ್ಲಿ, ಯಾವದೂ ವಿಹಿತವಲ್ಲ. ನಿರ್ಭಂಧವಿಲ್ಲದ ಲೈಂಗೀಕತೆ, ಇತರ ಪಾಪಗಳಂತೆ, ಒಬ್ಬ ವ್ಯಕ್ತಿಯನ್ನು ತೀವ್ರವಾಗಿ ಬಲಪಡಿಸುವ ಮಾರ್ಗವಾಗಿದೆ. “ಪಾಪಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ” (ಯೋಹಾನ 8:34). ಪೌಲನು **ಯಾವುದೂ ನನಗೆ ಯಜಮಾನನಲ್ಲ.** ಕ್ರಿಸ್ತನು ಅಪೊಸ್ತಲನ ಜೀವಿತದ ಯಜಮಾನನಾಗಿದ್ದಾನೆ ಎಂದು ಹೇಳುತ್ತಾನೆ, ಮತ್ತು ಯಾರೂ ಇಬ್ಬರೂ ಯಜಮಾನರಿಗೆ

ಸೇವೆ ಮಾಡಲಾರರು ಎಂಬುದು ಆತನಿಗೆ ತಿಳಿದದೆ (ಮತ್ತಾಯ 6:24).

**ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ, ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಅವೆ** ಎಂಬ ಘೋಷಣೆಯ ನಿಜವಾಗಿಯೂ ಆಹಾರದ ಕುರಿತಾಗಿ ಅಲ್ಲ. ಇಲ್ಲಿ ವಾದವೇನಂದರೆ ಹಸಿವು ಊಟಕ್ಕೆ ಕರೆನೀಡುವಂತೆ ಲೈಂಗೀಕ ಇಚ್ಛೆಯು ವ್ಯಕ್ತಪಡೆಸುವಿಕೆಗೆ ಕರೆನೀಡುತ್ತದೆ ಎಂದಾಗಿದೆ. ಎರಡೂ, ಲೈಂಗೀಕತೆ ಮತ್ತು ಊಟಮಾಡುವದು ಸ್ವಾಭಾವಿಕ ಇಚ್ಛೆಗಳಾಗಿರುವಂತೆ, ಒಂದರಲ್ಲಿ ತೊಡಗಿಸಿಕೊಳ್ಳುವದು ಇನ್ನೊಂದರಲ್ಲಿ ತೊಡಗಿಸಿಕೊಳ್ಳುವದಕ್ಕಿಂತ ಹೆಚ್ಚು ಪಾಪದಲ್ಲಿ ಕೂಡಿರುವದಲ್ಲ. ಪೌಲನು ಭಾಗಶಃ ಮಾತ್ರ ಒಪ್ಪಿಕೊಳ್ಳುತ್ತಾನೆ: ಘೋಷಣೆಯನ್ನು ದೇವರ ನ್ಯಾಯತೀರ್ಪಿನ ಬೆಳಕಿನಡಿಯಲ್ಲಿ ಎಲ್ಲಾ ತೊಡಗಿಸಿಕೊಳ್ಳುವಿಕೆಗಳನ್ನು ಪರಿಗಣಿಸಬೇಕು. ಆಹಾರದ ಹಸಿವು ಹೊಟ್ಟಬಾಕುತನಕ್ಕೆ ಅನುಮತಿಪತ್ರವಲ್ಲ ಮತ್ತು ಲೈಂಗೀಕತೆಯ ಇಚ್ಛೆಯು ಲೈಂಗಿಕ ಅನೈತಿಕತೆಗೆ ಅನುಮತಿಪತ್ರವಲ್ಲ. ದೇವರು ಎರಡೂ ಹಸಿವೆಗಳ ನೆರವೇರಿಕೆಗಾಗಿ ನಿರ್ಭಂಧಗಳೊಂದಿಗೆ ಒದಗಿಸಿದ್ದಾನೆ. ದೇಹ ಮತ್ತು ಅದರ ಹಸಿವುಗಳು ಕರ್ತನಿಗೆ ಸಂಬಂಧಿಸಿದವುಗಳಾಗಿವೆ. ಕ್ರೈಸ್ತರು ಅವುಗಳನ್ನು ತಮ್ಮ ಸನ್ನಿವೇಶದೊಳಗೆ ಆತನ ಬೋಧನೆಯ ಅಡಿಯಲ್ಲಿ ಕಾಯ್ದುಕೊಳ್ಳಬೇಕು. ಘೋಷಣೆಯು ಒಂದು ರೂಢಿಯನ್ನು ನಿರ್ಣಯಿಸುವ ಪ್ರಯತ್ನದಲ್ಲಿ ಹೆಚ್ಚಾಗಿ ಹಾದರಕ್ಕೆ ಪ್ರೇರಣೆಯಲ್ಲ ಈ ಸಹೋದರರು ಹಿಂದಿನ ವಿಗ್ರಹಾರಾಧಕರ ಜೀವಿತವನ್ನು ತಮ್ಮ ಮೇಲೆ ತೆಗೆದುಕೊಂಡು ಬಂದಿದ್ದಾರೆ.

**ವಚನ 14.** ದೈವಶಿಕ್ಷೆಗಳ ತತ್ವಶಾಸ್ತ್ರ (ಕರ್ತನ ಬರೋಣದ, ನ್ಯಾಯತೀರ್ಪಿನ ಮತ್ತು ಕೊನೆಯ ದಿವಸಗಳ ಕುರಿತಾದ ಬೋಧನೆ) ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರನ್ನು ದೈವೀಕ ಜೀವಿತವನ್ನು ನಡೆಸಲು ಎಚ್ಚರಿಸುತ್ತದೆ. ಪೇತ್ರನು ತನ್ನ ವರ್ಣನೆಯನ್ನು "ಕರ್ತನ ದಿನ" ಎಂದು ಹೇಳುವದರ ಮೂಲಕ ಮುಕ್ತಾಯಗೊಳಿಸುತ್ತಾನೆ, 2 ಪೇತ್ರ 3:10-12ರಲ್ಲಿ ಹೀಗೆ ಹೇಳುವದರ ಮೂಲಕ "ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ, ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ . . . !" ಅದೇರೀತಿಯಲ್ಲಿ, ಪೌಲನು, ತನ್ನ ಜ್ಞಾಪನವನ್ನು ಅನುಸರಿಸಿ ದೇಹವು ಕರ್ತನಿಗಾಗಿ ಮತ್ತು ಕರ್ತನು ದೇಹಕ್ಕಾಗಿ ಎಂದು ಹೇಳುವದರ ಮೂಲಕ ಓದುಗರ ಗಮನವನ್ನು ನ್ಯಾಯತಿರ್ಪಿನ ದಿನದೆಡೆಗೆ ಸೆಳೆಯುತ್ತಾನೆ: **ದೇವರು ಕರ್ತನನ್ನು ಎಬ್ಬಿಸಿದ್ದಲ್ಲದೆ ನಮ್ಮನ್ನೂ ತನ್ನ ಪರಾಕ್ರಮದಿಂದ ಎಬ್ಬಿಸುವನು.** ಅವರನ್ನು, ಮಾನವ ಕುಲವನ್ನು ಎಬ್ಬಿಸುವಾಗ "ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10). ಒಬ್ಬನ ನೆರೆಯವನ ಬೆಲೆಯನ್ನು ನೀಡುವದರ ಮೂಲಕ ಸ್ವ-ತೊಡಗಿಸಿಕೊಳ್ಳುವಿಕೆ ಹಸಿವನ್ನು ತೃಪ್ತಿಪಡಿಸಿಕೊಳ್ಳುವದಕ್ಕಿಂತ ಹೆಚ್ಚಾಗಿ ಪರಿಗಣಿಸಲಾಗುತ್ತದೆ. ಇದು ದೇವರ ಶಾಶ್ವತವಾದ ಯೋಜನೆಯ ವಿರುದ್ಧವಾಗಿದೆ.

**ವಚನ 15.** ಪೌಲನ ಎಚ್ಚರಿಕೆಗಳು ಕೊರಿಂಥದಲ್ಲಿರುವ ಕ್ರೈಸ್ತರಲ್ಲಿ ಯಾವುದಾದರೂ ಆತ್ಮೀಕವಾದ ಕೊರತೆಯಿರುವ ಸೂಚನೆಯನ್ನು ನೀಡುತ್ತಿದ್ದಲಿ, ಅವರಿಬ್ಬರೂ ಸೂಳೆಯರ ಉಪಯುಕ್ತತೆಯನ್ನು ಅಭ್ಯಾಸಿಸುತ್ತಿದ್ದರು ಮತ್ತು ಸಮರ್ಥಿಸುತ್ತಿದ್ದರು ಎಂದು ಹೇಳುವದು ಸುರಕ್ಷಿತವಾಗಿದೆ. ಕೊರಿಂಥವು ವಾಣಿಜ್ಯ ಮತ್ತು ಜನಪ್ರಿಯ ತತ್ವಜ್ಞಾನಶಾಸ್ತ್ರಕ್ಕೆ

ಒಳಮಾರ್ಗವಾಗಿತ್ತು. ಸೂಳೆಗಾರಿಕೆಯು ಕೊರಿಂಥದಂತ ವ್ಯಾಪಾರ ಕೇಂದ್ರಗಳಲ್ಲಿ ಇದರಷ್ಟೇ ದೊಡ್ಡದಾಗಿರುವ ಇತರ ಪಟ್ಟಣಗಳಿಗಿಂತ ಬಹಳ ಮಟ್ಟಿಗೆ ಹೆಚ್ಚು ಸಾಮಾನ್ಯವಾಗಿರಬಹುದು, ಆದರೆ ಪ್ರತಿಯೊಂದು ಗ್ರೀಕ್ ಪಟ್ಟಣಗಳಲ್ಲಿ ಮಾನವದೇಹದ ಮಾರಟದ ಸ್ಥಳ ಇರುತಿತ್ತು. ಕೇವಲ ನಾವಿಕರು ಮಾತ್ರ ಇದನ್ನು ಅಭ್ಯಾಸಿಸುತ್ತಿರಬಹುದು ಇದು ಇಂದಿನ ಲೋಕದಲ್ಲಿ ಹೆಚ್ಚು ಪ್ರಚಲಿತದಲ್ಲಿ ಇಲ್ಲ.

ಲೈಂಗೀಕತೆಯ ವ್ಯಾಪಾರವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುವವರನ್ನು ಅಪೊಸ್ತಲರು ಬಹಿಷ್ಕರಿಸಿದ್ದಾಗಲೂ, ಅವನು ಅದು ಕರ್ತನ ಜನರಿಗೆ ಸಮರ್ಥನೀಯವಲ್ಲ ಎಂದು ವಾದಿಸುವದನ್ನು ಮುಂದುವರೆಸುತ್ತಾನೆ. ಕ್ರೈಸ್ತರು ತಮ್ಮನ್ನು ಪಾಪದಿಂದ ವಿಮೋಚಿಸಿದ ರಕ್ಷಕನೊಂದಿಗೆ ಐಕ್ಯತೆಯನ್ನು ಹಂಚಿಕೊಳ್ಳುತ್ತಾರೆ. ಅಪೊಸ್ತಲನು ದೇಹ ಮತ್ತು ಆತ್ಮವನ್ನು ಒಂದು ಘಟಕವಾಗಿ ನೋಡುತ್ತಾನೆ. ಅಪೊಸ್ತಲನು ಪ್ರಕಟಿಸುತ್ತಾನೆ, **ನಿಮ್ಮ ದೇಹಗಳು** - "ನಿಮ್ಮ ಆತ್ಮ" ಅಲ್ಲ, ಒಬ್ಬನ ಆತ್ಮ ಪ್ರತ್ಯೇಕವಾದ ಘಟಕವಾಗಿರುವಂತೆ - **ಕ್ರಿಸ್ತನ ಅಂಗಗಳಾಗಿವೆ**. ಒಬ್ಬ ವ್ಯಕ್ತಿ ಏನು ಮಾಡುತ್ತಾನೆ, ಕ್ರಿಸ್ತನ ದೇಹ ಏನನ್ನು ಮಾಡುತ್ತದೆ ಉತ್ತಮವಾದದ್ದನ್ನೋ ಅಥವಾ ಕೆಟ್ಟದ್ದನ್ನೋ. ಮುಂದೆ ಇದೇ ಪತ್ರದಲ್ಲಿ, ಪೌಲನು ಬರೆಯುತ್ತಾನೆ. "ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" (12:27). ಸಹೋದರರು ಮತ್ತು ಸಹೋದರಿಯರು ವಯಕ್ತಿಕ ನಡತೆಯಲ್ಲಿ ಭಾಗತೆಗೆದುಕೊಳ್ಳುತ್ತಾರೆ; ಇದೇ ರೀತಿಯಲ್ಲಿ ಕರ್ತನು ಸಭೆಯನ್ನು ರಚಿಸಿದ್ದಾನೆ. 6:15ರಲ್ಲಿರುವ ಅಲಂಕಾರಿಕ ಪ್ರಶ್ನೆಗೆ, ಪೌಲನು ಲೈಂಗೀಕ ವ್ಯಾಪಾರಕ್ಕೆ ಬಹಳಷ್ಟು ಪ್ರಭಾವವಿರುವದನ್ನು ಕೇಂದ್ರಿಕರಿಸುತ್ತಾನೆ: **ನಾನು ಕ್ರಿಸ್ತನ ಅಂಗಗಳಾಗಿರುವಂಥವುಗಳನ್ನು ತೆಗೆದುಬಿಟ್ಟು ಸೂಳೆಯ ಅಂಗಗಳಾಗಿ ಮಾಡಬಹುದೋ?** ಪ್ರಶ್ನೆ ತಾನೆ ಕೋಪವನ್ನು ಪ್ರದರ್ಶಿಸುತ್ತದೆ. **ಎಂದಿಗೂ ಮಾಡಬಾರದು** [μὴ γένοιτο, *mē genoito*]! ಅಪೊಸ್ತಲನು ಪ್ರತಿಕ್ರಿಯಿಸುತ್ತಾನೆ. ಕ್ರೈಸ್ತರಿಗೆ, ನೈತಿಕ ಆಯ್ಕೆ ಯಾವಾಗಲೂ ತಮ್ಮ ಸ್ವಾರ್ಥಕ್ಕಾಗಿ ಮಾತ್ರ ಅಲ್ಲ. ಪ್ರತಿಯೊಬ್ಬರ ನಡತೆ ಎಲ್ಲರಿಗೂ ವಿಸ್ತರಿಸುತ್ತದೆ.

**ವಚನ 16.** ಒಬ್ಬನು ದೈಹಿಕವಾಗಿ ಏನು ಮಾಡುತ್ತಾನೋ ದೈಹೀಕ ಕ್ರಿಯೆಯಾದ ದೀಕ್ಷಾಸ್ನಾನವನ್ನು ಆತ್ಮೀಕ ನಂಬಿಕೆಯಿಂದ ಮತ್ತು ಕ್ರಿಸ್ತನಿಗೆ ಅಧೀನರಾಗುವದರಿಂದ ಹೇಗೆ ಪ್ರತ್ಯೇಕಿಸಲಾಗದೋ ಹಾಗೆ ದೇಹದಿಂದ ನಡೆಸುವ ಕ್ರಿಯೆಗಳು ಒಬ್ಬನು ಕ್ರಿಸ್ತನೊಂದಿಗೆ ಆತ್ಮೀಕ ಐಕ್ಯತೆಯಿಂದ ಪ್ರತ್ಯೇಕಿಸಲಾಗದು. ಅಥವಾ **ಸೂಳೆಯ ಸಂಸರ್ಗ ಮಾಡುವವನು ಅವಳೊಂದಿಗೆ ಒಂದೇ ದೇಹವಾಗಿದ್ದಾನೆಂಬುದು ನಿಮಗೆ ತಿಳಿಯದೋ?** ಎಂಬುದು ನಿಮಗೆ ತಿಳಿಯದೋ? ಪೌಲನು ಕೇಳುತ್ತಾನೆ, ಕ್ರೈಸ್ತರ ದೇಹವು ವಿಶ್ವಾಸಿಗಳ ಸಮೂಹದಲ್ಲಿ ಬಂಧಿಸಲ್ಪಟ್ಟಿದೆ ಮತ್ತು ಕ್ರೈಸ್ತರು ಒಟ್ಟಾಗಿ ಕ್ರಿಸ್ತನ ದೇಹವಾಗಿದ್ದಾರೆ.

> ಅವನು ಕೊರಿಂಥದವರಿಗೆ ಏನನ್ನು ಜ್ಞಾಪಿಸುತ್ತಿದ್ದಾನೆಂದರೆ ಅವರು ತಾವೇ *themselves* ("ನಾವು" - 6:14) ಕ್ರಿಸ್ತನ ಸದಸ್ಯರಾಗಿದ್ದಾರೆ - ಅವರು ತಾವೇ ಖಂಡಿತವಾಗಿ ಸ್ವಶರೀರಿಗಳಾದ ಜೀವಿಗಳಾಗಿದ್ದಾರೆ, ಅವರ ದೇಹದ ಕಾರ್ಯಗಳು ಶಿಷ್ಯತ್ವಕ್ಕೆ ಅವರಿಗಿರುವ ಸಮರ್ಪಣೆಯ ಗುಣಮಟ್ಟ ಮತ್ತು ಗುಣಲಕ್ಷಣಗಳನ್ನ ಸೂಚಿಸುತ್ತವೆ.[17]

6:16ರಲ್ಲಿ ಪೌಲನು ವಾದಿಸುತ್ತಾನೆ, ಹಾದರ, ಕೇವಲ ದೈಹೀಕ ಕಾರ್ಯವಲ್ಲ. ಅವನು

ಆದಿಕಾಂಡ 2:24 ನ್ನು ಉಲ್ಲೇಖಿಸುತ್ತಾನೆ: **ಇಬ್ಬರೂ ಒಂದೇ ಶರೀರವಾಗಿರುವರು.** ಸೂಳೆಯ ಸಂಪರ್ಕವನ್ನು ಹೊಂದುವವನು ಪಾಪವನ್ನು ಮಾಡುವ ಕಳಂಕವನ್ನು ಹೊಂದುವವನಾಗಿದ್ದಾನೆ. ಸೂಳೆಯೊಂದಿಗೆ ಲೈಂಗೀಕ ಸಂಪರ್ಕವನ್ನು ಹೊಂದುವವನು ಕ್ರಿಸ್ತನ ದೇಹದೊಂದಿಗೆ ಅನ್ಯತಿಕತೆಯನ್ನು ಸೇರಿಸುತ್ತಾನೆ. ಪೌಲನು ಇದನ್ನು ವ್ಯವಹಾರಿಕವಾಗಿ ಮಾತನಾಡುತ್ತಿಲ್ಲ; ವ್ಯಭಿಚಾರವು ನಾಗರೀಕರಲ್ಲಿ ಆಳವಾಗಿ ಬೇರೂರಿತ್ತು ಮತ್ತು ಗ್ರೀಕ್ ಪಟ್ಟಣಗಳ ಧಾರ್ಮಿಕ ಜೀವಿತದಲ್ಲಿ ಸಹ. ಇಂದು ಕೆಲವರು ಜನರನ್ನು ಅಮಾನವೀಯರಾಗಿ ಮಾಡುವ ಈ ಅಭ್ಯಾಸವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಒಬ್ಬ ವ್ಯಕ್ತಿಯನ್ನು ಇನ್ನೊಬ್ಬನ ದೈಹಿಕ ತೃಪ್ತಿಯ ವಸ್ತುವನ್ನಾಗಿ ಮಾಡಿಕೊಳ್ಳುತ್ತಾರೆ, ಆದರೆ ಇಂಥಹ ಯಾವುದೇ ಪ್ರಯತ್ನಗಳು ಸತ್ಯವೇದದ ನೈತಿಕತೆಯನ್ನು ಅಲ್ಲಗಳೆಯುತ್ತವೆ. "ಸಾಮಾನ್ಯ ಲೈಂಗೀಕತೆ ಎಂಬ ಸಂಗತಿಯಿಲ್ಲ, ಸಹಭಾಗಿಗಳಲ್ಲಿ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಯಾವುದೇ ಉದ್ದೇಶವಿಲ್ಲದಿದ್ದರೂ ಅದು ಸಹಿಸಿಕೊಳ್ಳಬಹುದಾದ ಯಾವ ಪರಿಣಾಮವನ್ನು ನೀಡುವದಿಲ್ಲ."[18] ಈ ಸಹೋದರರು "ಕ್ರಿಸ್ತನ ದೇಹರಾಗಿದ್ದರು" ಮತ್ತು ತಮ್ಮನ್ನು ತಾವು ಪರಿಶುದ್ಧವಾಗಿ ಇಡಲು ಅಗತ್ಯವಿದೇ ಎಂಬುದನ್ನು "ಅರಿಯರೋ"? ಸಹಜವಾಗಿ ಅವರಿಗೆ ತಿಳಿದಿತ್ತು!

**ವಚನ 17.** ಒಬ್ಬ ಪುರುಷನು ಸೂಳೆಯೊಂದಿಗೆ ಸೇರಿಕೊಳ್ಳುವದಕ್ಕೆ ಮತ್ತು ಒಬ್ಬ ಕ್ರೈಸ್ತನು ಕ್ರಿಸ್ತನೊಂದಿ ಸೇರಿಕೊಳ್ಳುವದಕ್ಕೆ ಇದೇ ಪದವನ್ನು (κολλάομαι, *kollaomai*) ಪೌಲನು ಉಪಯೋಗಿಸುತ್ತಾನೆ. ಒಬ್ಬ ಮನುಷ್ಯನು ಮೊದಲೇ ತನ್ನನ್ನು ತಾನು **ಕರ್ತನೊಂದಿಗೆ ಸೇರಿಸಿಕೊಂಡು**, ತನ್ನನ್ನು ತಾನು ಸೂಳೆಯೊಂದಿಗೆ ಸೇರಿಕೊಳ್ಳುವ ಮನುಷ್ಯನು ಒಟ್ಟಾರೆ ಕ್ರಿಸ್ತನನ್ನು ಮತ್ತು ಆತನ ಜನರನ್ನು ಹಾಸ್ಯಮಾಡುವದಾಗಿದೆ. ಕರ್ತನಿಗೆ ಸಂಬಂಧಿಸಿದವರು ಎಂದರೆ **ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ** ಎಂಬುದಾಗಿದೆ. ನಂತರ ಸೂಳೆಯೊಂದಿಗೆ ಒಂದಾಗುವದು ಕ್ರಿಸ್ತನೊಂದಿಗೆ ಒಂದೇ ಆಗಿರುವ ಅನ್ಯೋನ್ಯತೆಯನ್ನು ಸುಳ್ಳಾಗಿ ಮಾಡುವದಾಗಿದೆ.

## ಪೌಲನ ಎಚ್ಚರಿಕೆ (6:18-20)

**[18]ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ, ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರಗಾಗಿವೆ, ಆದರೆ ಜಾರತ್ವಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ. [19]ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂದು ನಿಮಗೆ ತಿಳಿಯದೋ? [20]ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಸ್ವಭಾವವನ್ನು ಪ್ರಕಾಶಪಡಿಸಿರಿ.**

**ವಚನ 18.** ದೇಹದ ಮೂಲಕ ಉಲ್ಲಂಘಿಸಿ ಲೈಂಗೀಕ ಸಂಯೋಗದಲ್ಲಿ ಆತ್ಮೀಯತೆ ಒಂದು ವಿಶಿಷ್ಟವಾದ ಗುಣಲಕ್ಷಣಹೊಂದಿರುವ ಪಾಪವಾಗಿದೆ. ವೈರಾಗ್ಯವನ್ನು ತಲುಪುವ ಆಜ್ಞಾಧಾರಕಥೆಯನ್ನು ಉಪಯೋಗಿಸಿ, **ಜಾರತ್ವಕ್ಕೆ ದೂರವಾಗಿ ಓಡಿಹೋಗಿರಿ** ಎಂದು ಅಪೊಸ್ತಲನು ಬೇಡಿಕೊಳ್ಳುತ್ತಾನೆ, ಲೈಂಗಿಕ ಅನೈತಿಕತೆಯ ಮೂಲಕ ಮಾತ್ರ ಒಬ್ಬನು

ಅನೈತಿಕನಾಗುವದು ಖಂಡಿತ ಸಾಧ್ಯವಿಲ್ಲ; ಆದರೆ ಪೌಲನು ಇದನ್ನು ಒಂದು ವಿಚಿತ್ರವಾದ ವಿನಾಶಕರಿ ಮಾರ್ಗವಾಗಿ ಕಂಡುಕೊಂಡಿದ್ದಾನೆ. ಪಾಪಗಳಲ್ಲಿ ಹಾದರ ವಿಶಿಷ್ಟವಾದದ್ದಾಗಿದೆ ಅದರಲ್ಲಿ ಅದು ಮಾನವನ ದೇಹವನ್ನು ಸೆರೆಹಿಡಿಯುತ್ತದೆ**. ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು ದೇಹಕ್ಕೆ ಹೊರಗಾಗಿವೆ, ಆದರೆ ಜಾರತ್ವಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ** ಎಂದು ಪೌಲನು ಬೇಡಿಕೊಳ್ಳುತ್ತಾನೆ. ಕಾರ್ಯಕ್ಕಿಂತ ಹೆಚ್ಚಾಗಿ ಅನ್ಯತಿಕತೆಗೆ ಸಂಪೂರ್ಣ ವ್ಯಕ್ತಿಯ ತೊಡಗಿಸುವಿಕೆಯ ಅವಶ್ಯಕತೆಯಿದೆ. ಕ್ರಿ.ಪೂ. ಮೂರನೆಯ ಶತಮಾನದ ಯೆಹೂದ್ಯರ ದಾಖಲೆಯ ಒಂದು ಭಾಗ "ಯಾಕೋಬ ಮತ್ತು ಲೇಹಳ ಮಗನಾದ ಸಿಮಿಯೋನನ ಒಡಂಬಡಿಕೆ" ಎಂದು ಗುರುತಿಸಲಾಗಿದೆ, ಇದು "ಲೈಂಗೀಕ ಅವ್ಯವಸ್ಥತೆಯಿಂದ ಎಚ್ಚರವಾಗಿರ್ರಿ ಯಾಕಂದರೆ ಹಾದರವು ಎಲ್ಲಾ ಕೆಟ್ಟಕಾರ್ಯಗಳಿಗೆ ತಾಯಿಯಾಗಿದೆ; ಅದು ದೇವರಿಂದ ನಮ್ಮನ್ನು ಪ್ರತ್ಯೇಕಿಸುತ್ತದೆ ಮತ್ತು ಮನುಷ್ಯನನ್ನು ಸುಳ್ಳುಗಾರನನ್ನಾಗಿಸುತ್ತದೆ"[19] ಪೌಲನು "ದೇಹವಿಲ್ಲದೇ ಮನುಷ್ಯನು ಏನಾಗಿರಬಹುದು?" ಎಂದು ಬಹುಶಃ ಕೇಳುತ್ತಿರಬಹುದು. ಲೈಗಿಂಕ ಹಸಿವನ್ನು ಹಗುರವಾಗಿ ಪರಿಗಣಿಸುವದರ ಪರಿಣಾಮ ಸ್ವ-ನಾಶನದಲ್ಲಿ ನಡೆಸುತ್ತದೆ. ಮುರಿದ ಮನೆಗಳು ಅಲ್ಲಕಲ್ಲೋಲವಾದ ಜೀವಿತಗಳು ಅಪೊಸ್ತಲನ ಅಂತರಜ್ಞಾನಕ್ಕೆ ಸಾಕ್ಷಿಯಾಗಿವೆ. Jimmy Allen ಅವರು ವೇದವಾಕ್ಯದಲ್ಲಿ ಮೇಲಿಂದ ಮೇಲೆ ಕಂಡುಬರುವ ಕೆಲವು ತಿಳುವಳಿಕೆಗಳನ್ನು ಹಂಚಿಕೊಳ್ಳುತ್ತಾರೆ, "ದುಷ್ಟರು ಈಗ ಶಿಕ್ಷೆಯನ್ನು ಹೊಂದುತ್ತಾರೆ ತಾವು ಮಾಡುವ ಪಾಪಕ್ಕಿಂತ, ತಮ್ಮ ಪಾಪಕ್ಕಾಗಿ ಹೆಚ್ಚಾಗಿ ಅಲ್ಲ."[20]

**ವಚನ 19**. **"ನಿಮಗೆ ತಿಳಿಯದೋ . . ."** ಎಂದು ಪೌಲನು ಬರೆಯುವಾಗ "ನಿಮಗೆ ಖಂಡಿತವಾಗಿ ತಿಳಿದಿದೆ ಎಂದರ್ಥ." ಮೊದಲು, ಪೌಲನು ಸಭೆಯಲ್ಲಿ ಐಕ್ಯತೆಗಾಗಿ ಬೇಡಿಕೊಂಡನು, ಕೊರಿಂಥದಲ್ಲಿರುವ ಕ್ರೈಸ್ತರಿಗೆ, ಅವರೆಲ್ಲರೂ ಒಟ್ಟಾಗಿ, ದೇವರ ಆಲಯವಾಗಿದ್ದಾರೆ ಎಂದು ಜ್ಞಾಪಿಸುತ್ತಾನೆ (3:16, 17; ನೋಡಿರಿ 2 ಕೊರಿಂಥ 6:16). ಅಪೊಸ್ತಲನು "ದೇವರ ಆಲಯ" ಮತ್ತು **ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದೆಂಬುದರ** ಮಧ್ಯದಲ್ಲಿ ಯಾವುದೇ ಪಕ್ಷಪಾತವನ್ನು ಮಾಡುವದಿಲ್ಲ. ಎರಡೂ ವಾಕ್ಯಾಂಗಗಳು ಬದಲಾಯಿಸಿಕೊಳ್ಳ ಬಹುದಾದವುಗಳಾಗಿವೆ. ಅಂತಿಮ ನಿರ್ಣಯವೆಂದರೆ ಒಟ್ಟಾರೆ ಸಭೆಯು ದೇವರು ವಾಸಿಸುವ ಸ್ಥಳವಾಗಿದೆ ಆದರೆ ಪವಿತ್ರಾತ್ಮನು ಪ್ರತ್ಯೇಕವ್ಯಕ್ತಿಯಲ್ಲಿ ವಾಸಿಸುತ್ತಾನೆ ಎಂಬುದು ಅನಧಿಕೃತವಾಗಿದೆ. ಸಮೂಹವಾಗಿ ಅಥವಾ ವಯಕ್ತಿಕವಾಗಿ, ತಂದೆಯಾದ ದೇವರು, ಮಗನಾದ ದೇವರು ಮತ್ತು ಪವಿತ್ರಾತ್ಮನಾದ ದೇವರು ವಿಶ್ವಾಸಿಗಳಲ್ಲಿ ನೆಲೆಸುತ್ತಾರೆ. ವಿಶ್ವಾಸಿಗಳು ಆತನ ಪ್ರಸನ್ನತೆ ಮತ್ತು ನಮ್ಮೊಳಗೆ ವಾಸಿಸುವ ದೂತನ ಬಲದಿಂದ ತುಂಬಲ್ಪಟ್ಟಿದ್ದಾರೆ ಎಂಬುದನ್ನು ವಾಸಿಸುವದು ದೃಢಪಡಿಸುತ್ತದೆ. ನಂಬಿಕೆ (2 ತಿಮೊಥಿ 1:5), ದೇವರು (2 ಕೊರಿಂಥ 6:16), ಪವಿತ್ರಾತ್ಮನು (ರೋಮ 8:11), ವಾಕ್ಯವು (ಕೊಲಸ್ಸೆ 3:16), ಅಥವಾ ಕ್ರಿಸ್ತನು (ಕೊಲಸ್ಸೆ 1:17) ವಾಸಿಸುವದಾಗಲಿ ಒಂದು ರೀತಿಯ ಹರಡುವಿಕೆಯನ್ನು ಒಳಗೊಂಡಿದೆ.

ಪ್ರಸ್ತುತ ಸನ್ನಿವೇಶದಲ್ಲಿ, ಅಪೊಸ್ತಲನು ವ್ಯಕ್ತಿಯ ವಾಸ್ತವ ದೇಹದ ಕುರಿತು ಬರೆಯುತ್ತಾನೆ. ಅವನು ಒಬ್ಬ ವ್ಯಕ್ತಿಯ ದೇಹವನ್ನು ಸೂಳೆಯೊಂದಿಗೆ ಸೇರಿಸಬಾರದು

ಎಂಬುದನ್ನು ತೋರಿಸುತ್ತಿದ್ದಾನೆ. 3:16, 17ರಲ್ಲಿ ಒಂದು ಭಾಷಾಲಂಕಾರವನ್ನು ಉಪಯೋಗಿಸಿ, ಪೌಲನು ಸಂಪೂರ್ಣ ಸಭೆಯನ್ನು ದೇವರ ಆಲಯವೆಂದು ಪ್ರತಿನಿಧಿಸುತ್ತಾನೆ. ತನ್ನ ರೂಪಕ ಅಲಂಕಾರವನ್ನು 6:19ರಲ್ಲಿ ಸ್ಥಳಾಂತರಿಸುತ್ತಾ, ಪೌಲನು ವ್ಯಕ್ತಿಯ ದೇಹವು "ಪವಿತ್ರಾತ್ಮನ ಆಲಯವಾಗಿರಬೇಕು"[21] ಎಂದು ಪ್ರಕಟಿಸುತ್ತಾನೆ. ಪ್ರತ್ಯೇಕ ವಿಶ್ವಾಸಿಗೆ ದೇವರ ಮತ್ತು ಐಕ್ಯತೆಯಲ್ಲಿರುವ ದೇಹವೆಂಬ ಸಭೆಗೆ ಪವಿತ್ರಾತ್ಮನ ಬಹುಮಾನವಾಗಿದೆ (ನೋಡಿರಿ ಅ.ಕೃ. 2:38; ಗಲಾತ್ಯ 4:6). ನಮ್ಮೊಳಗೆ ನೆಲೆಸಿರುವ ಆತ್ಮ ದೇವರ ಒಡೆತನಕ್ಕೆ ಗುರುತಾಗಿದೆ. ಸಮೂಹವಾಗಿ ಸಭೆಯನ್ನು ಅಥವಾ ವಯಕ್ತಿಕ ವಿಶ್ವಾಸಿಯನ್ನು "ದೇವರ ಆಲಯ ಎಂದು" ಅಥವಾ "ಆತ್ಮನ ಆಲಯ ಎಂದು" ಕರೆಯಬಹುದು. ಯಾವುದೇ ಸಂದರ್ಭದಲ್ಲಿ, ಅಪೊಸ್ತಲನು ದೈವತ್ವದಲ್ಲಿ ನೆಲೆಸಿದ ಒಬ್ಬ ಮನುಷ್ಯನಿಗೆ ಸೂಳೆಯೊಂದಿಗೆ ಸೇರಿಕೊಳ್ಳುವದು ಯೋಚಿಸಲು ಅಸಾಧ್ಯವಾಗಿ ತೋರಿಬರುತ್ತದೆ.

**ವಚನ 20.** ಸಭೆಯ ದೇಹದಲ್ಲಿ ಕ್ರೈಸ್ತರ ತೊಡಗಿಸುವಿಕೆ ಪ್ರತಿಯೊಬ್ಬ ವ್ಯಕ್ತಿಯ ಅನೈತಿಕತೆ ಅಥವಾ ದೈವೀಕತೆ ಕೊರಿಂಥದಲ್ಲಿರುವ ಸದಸ್ಯರಿಗೆ ಅವಮಾನಕರ ಅಥವಾ ಸಂಪೂರ್ಣ ಸಭಿಕರ ಮಹಿಮೆಗಾಗಿ ಆಗಿದೆ. ತನ್ನ ಮೇಲೆ ಆಳ್ವಿಕೆಯನ್ನು ಮಾಡುತ್ತಿರುವ ಕರ್ತನನ್ನು ಪ್ರತಿಬಿಂಬಿಸುವ ವಯಕ್ತಿಕ ಕ್ರೈಸ್ತರ ನಡತೆ ಮಾತ್ರವಲ್ಲ, ಈ ಕ್ರೈಸ್ತರು "ಜಾರತ್ವಕ್ಕೆ ದೂರ ಓಡಿಹೋಗುವದಕ್ಕೆ" (6:18) ಒತ್ತಾಯಪಡಿಸಲು ಇಲ್ಲಿ ಇನ್ನೊಂದು ಮಹತ್ವದ ಕಾರಣವಿದೆ **ಅವರು ಕ್ರಯಕ್ಕೆ ಕೊಳ್ಳಲ್ಪಟ್ಟಿದ್ದಾರೆ**, ಅವರು ತಮ್ಮ ಸ್ವಂತ ಸೊತ್ತಲ್ಲ. ಅವರ ಬೆಲೆಯು - ನಮ್ಮಂತೆ - ಕುರಿಮರಿಯ ಅಮೂಲ್ಯ ರಕ್ತವಾಗಿದೆ (ನೋಡಿರಿ ಯೋಹಾನ 1:29; 1 ಪೇತ್ರ 1:18, 19).

ಗುಲಾಮತನ ಗ್ರೀಕ್-ರೋಮನ್ ಜೀವಿತದಲ್ಲಿ ಪ್ರತಿನಿತ್ಯದ ಜೀವಿತದ ಭಾಗವಾಗಿರುವದರಿಂದ, "ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುವದು" ಇಂದಿನ ಓದುಗರಿಗಿಂತ ಹೆಚ್ಚಾಗಿ ಪೌಲನ ಪತ್ರಗಳನ್ನು ಓದುವದು ಪ್ರಥಮ ಓದುಗರಿಗೆ ಬಹಳ ಅರ್ಥಪೂರ್ಣವಾಗಿತ್ತು. ಕೊರಿಂಥದಲ್ಲಿರುವ ಕೆಲವು ಕ್ರೈಸ್ತರು ನಿಜವಾಗಿಯು ಇನ್ನೊಬ್ಬರ ಒಡೆತನದಲ್ಲಿದ್ದರು (ನೋಡಿರಿ 7:21, 22). "ನೀವು ಕ್ರಯವನ್ನು ಕೊಟ್ಟು ಕೊಂಡುಕೊಂಡವರಾಗಿದ್ದೀರಿ" ಆಜ್ಞೆಗೆ ಅವಕಾಶವನ್ನು ಒದಗಿಸುತ್ತದೆ: **ಆದುದರಿಂದ ನಿಮ್ಮ ದೇಹದಲ್ಲಿ ದೇವರನ್ನು ಮಹಿಮೆ ಪಡಿಸಿರಿ.** ಅವನ ಕೃಪೆಯಲ್ಲಿ ನಂಬಿಕೆಯನ್ನಿಡುವವರಿಗೆ ತಮ್ಮ ದೇಹ ಮತ್ತು ಆತ್ಮದೊಂದಿಗೆ ವಿಧೇಯರಾಗುವದು ಕ್ರಿಸ್ತನಿಗೆ ಸರಿಯಾದ ಪ್ರತಿಕ್ರಿಯೆಯಾಗಿದೆ

## ಅಳವಡಿಸುವಿಕೆ

### ಕ್ರೈಸ್ತರು ಮತ್ತು ನ್ಯಾಯಾಲಯಗಳು

ಆಡಳಿತ, ಕಾನೂನು ಮತ್ತು ವ್ಯವಸ್ಥೆ, ನ್ಯಾಯಾಲಯದ ವ್ಯವಸ್ಥೆ ಮತ್ತು ಸಾಮಾಜಿಕ ಸಂಸ್ಥೆಗಳು ಇಂದು ಗ್ರೀಕೋ-ರೋಮನ್ ಲೋಕದಲ್ಲಿ ಪೌಲನು ಮತ್ತು ಆತನ ಪ್ರಥಮ ಓದುಗರು ವಾಸಿಸುತ್ತಿದ್ದ ಸ್ಥಳದಲ್ಲಿ ಇರುವದಕ್ಕಿಂತ ಅನೇಕ ಸ್ಥಳಗಳಲ್ಲಿ ವಿಶಾಲವಾದ

ವ್ಯತ್ಯಾಸವನ್ನು ಹೊಂದಿವೆ. ಅದರಂತೆ, ಸಂಸ್ಕೃತಿಯುದ್ದಕ್ಕೂ, ಒಬ್ಬ ಸಹೋದರನು ಇನ್ನೊಬ್ಬ ಸಹೋದರನ ವಿರುದ್ಧವಾಗಿ ನ್ಯಾಯಾಲಕ್ಕೆ ಹೋಗುವ ಸಂಗತಿಯ ಕುರಿತು ಪೌಲನ ಎಚ್ಚರಿಕೆಯನ್ನು ಸ್ಥಳಾಂತರಿಸುವದು ಕಠಿಣವಾಗಿದೆ. ಪೌಲನ ಮಾತುಗಳನ್ನು ಎಚ್ಚರಿಕೆಯಿಂದ ಅಳವಡಿಸಿಕೊಳ್ಳಬೇಕು.

ನ್ಯಾಯಸಮ್ಮತವಾದ ಜಗಳಗಳು ಆಸ್ತಿಯನ್ನು ಅಥವಾ ಇನ್ನೊಬ್ಬನ ಹಕ್ಕುಗಳನ್ನು ಹೊಂದಿಕೊಳ್ಳುವ ಬೇಡಿಕೆಯ ತಂತ್ರಗಳ ಲಾಭಗಳನ್ನು ಪಡೆದುಕೊಳ್ಳುವ ಪಂಗಡಗಳನ್ನು ತೊಡಗಿಸಿಕೊಂಡಿರಬಹುದು. ಯಾವುದು ನ್ಯಾಯಸಮ್ಮತೋವೋ ಅದು ನೈತಿಕವಾಗಿ ಸಮರ್ಥನೀಯವಾಗಿರಬೇಕೆಂಬ ಅಗತ್ಯತೆಯಿಲ್ಲ. ಯಾರಿಗೆ ಹಣ ಮತ್ತು ಸಂಪನ್ಮೂಲಗಳ ಮಾರ್ಗಗಳಿವೆಯೋ ಅವರು ನೆರೆಹೊರೆಯವರಿಗೆ ಸಂಬಂಧಿಸಿರುವದನ್ನು ಹೊಂದಿಕೊಳ್ಳುವ ಬೇಡಿಕೆಯನ್ನು ಇಡುವದರಲ್ಲಿ ಶಕ್ತರಾಗಬಹುದು. ಅಸಹಾಯಕರ, ಮುಗ್ದಜನರ ಅಥವಾ ಇನ್ನೊಬ್ಬ ವ್ಯಕ್ತಿಯ ಬಡತನವನ್ನು ಸ್ವಂತ ಲಾಭಕ್ಕಾಗಿ ತೆಗೆದುಕೊಳ್ಳುವದು ದೇವರ ಕೋಪವನ್ನು ಆಮಂತ್ರಿಸುವದಾಗಿದೆ. ಅರಸನಾದ ಆಹಾಬನು ನಾಬೋತನಿಗೆ ಸಂಬಂಧಿಸಿದ ದ್ರಾಕ್ಷೇತೋಟವನ್ನು ಅಪಹರಿಸಲು ನೋಡಿದನು (1 ಅರಸುಗಳು 21:1, 2). ನಾಬೋತನು ಅದನ್ನು ಮಾರಲು ನಿರಾಕರಿಸಿದಾಗ, ಆಹಾಬನ ಹೆಂಡತಿ ಈಜಬೇಲಳು ಅವನ ವಿರುದ್ಧವಾಗಿ ಸುಳ್ಳು ಸಾಕ್ಷಿಗಳನ್ನು ಬಾಡಿಗೆ ತೆಗೆದುಕೊಂಡಳು ಮತ್ತು ಅವನನ್ನು ಕಲ್ಲೆಸೆದು ಕೊಂದಳು. ದೇವರು ಅರಸುಮನೆತನದ ದಂಪತಿಗಳು ಮಾಡಿದ ಪಾಪಕ್ಕೆ ಬೆಲೆಯನ್ನು ತೆರಬೇಕೆಂದು ಆಜ್ಞಾಪಿಸಿದನು (1 ಅರಸುಗಳು 21:9-23).

ಇದಕ್ಕೆ ಬದಲಾಗಿ, ಎರಡು ಉತ್ತಮ-ಉದ್ದೇಶಹೊಂದಿರುವ ಜನರು ಒಂದೇರೀತಿಯ ಸನ್ನಿವೇಶವನ್ನು ವಿಭಿನ್ನ ರೀತಿಯಲ್ಲಿ ನೋಡಬಹುದು. ಇಬ್ಬರೂ ತಾವು ಸರಿಯಾಗಿದ್ದೇವೆ ಎಂದು ಮನದಟ್ಟು ಮಾಡಿಕೊಳ್ಳಬಹುದು. ಎರಡೂ ಪಂಗಡದವರು ಕ್ರೈಸ್ತರಾಗಿದ್ದಲ್ಲಿ, ಪೌಲನ ಎಚ್ಚರಿಗೆ ಅವರು ಒಬ್ಬರಿಗೊಬ್ಬರು ಸಮಂಜಸವಾದ ಮನುಷ್ಯರಂತೆ ಮಾತನಾಡಿಕೊಳ್ಳಬೇಕು, ಪ್ರತಿಯೊಬ್ಬರೂ ಫಲವನ್ನು ನೀಡುವದಕ್ಕೆ ಸಿದ್ಧರಾಗಿರಬೇಕು. ಸಹೋದರರ ಮಧ್ಯದಲ್ಲಿ ಅಡೆತಡೆಯನ್ನು ಮಾಡುವ ಜಗಳಗಳಿಗೆ ಅನುಮತಿಸುವದಕ್ಕಿಂತ "ಅನ್ಯಾಯವನ್ನು ಸಹಿಸುವದು" ಉತ್ತಮ ಎಂದು ಪೌಲನು ಹೇಳುತ್ತಾನೆ (1 ಕೊರಿಂಥ 6:7ಬಿ). ಪರಸ್ಪರ ಒಪ್ಪಂದ ಆಗದಿದ್ದಲ್ಲಿ, ಸಹೋದರರು ವಿಷಯವನ್ನು ಸಭೆಯಲ್ಲಿರುವ ಜಾಣರಾದ ಮನುಷ್ಯರ ಮುಂದೆ ಇರಿಸಲು ಅಪೊಸ್ತಲನು ಒತ್ತಾಯಪಡಿಸುತ್ತಾನೆ. ಕ್ರಿಸ್ತನ ಆತ್ಮದಲ್ಲಿ, ಎರಡು ಪಂಗಡದವರು ಅವರ ತೀರ್ಪನ್ನು ಒಪ್ಪಿಕೊಳ್ಳಬೇಕು.

ಅತಿರೇಕದ ವಿಷಯಗಳಲ್ಲಿ ಮಾತ್ರ ಒಬ್ಬ ವಿಶ್ವಾಸಿಯು ವಿಷಯವನ್ನು, ಸಹೋದರನ್ನು, ಪ್ರಾಪಂಚಿಕ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗುವದರ ಮೂಲಕ ನಿರ್ಣಯಿಸಬೇಕು. ಒಂದು ಪಂಗಡದವರು ಒಪ್ಪಂದಕ್ಕೆ ಬರದೇ ಉತ್ತಮವಾದ ನಂಬಿಕೆಯೊಂದಿಗೆ ಇರುವದರಲ್ಲಿಯೇ ತೃಪ್ತಿಹೊಂದದಿರುವಾಗ ಮತ್ತು ಸಹ ಕ್ರೈಸ್ತರ ತೀರ್ಪನ್ನು ತಿರಸ್ಕರಿಸುವಾಗ ಇದು ಕೊನೆಯ ಆಯ್ಕೆಯಾಗಿರಬೇಕು. ಕೇವಲ ಇಂಥಹ ವಿಷಯಗಳಲ್ಲಿ ತೋಡಗಿಸಿಕೊಳ್ಳುವದು ಸೋಲು ಆಗಿದೆ (6:7ಅ). ಸಭಿಕರು ಇಂಥಹ ದುರಾಶೆಯನ್ನು ಪ್ರದರ್ಶಿಸುವ ಮತ್ತು ಕರ್ತನ ಸಭೆಗೆ ಇಂಥಹ ಅಗೌರವವನ್ನು ತೋರಿಸುವ ಯಾವುದೇ ಸಹೋದರನ ವಿರುದ್ಧ ಶಿಸ್ತಿನ ಕ್ರಮಗಳನ್ನು ಪರಿಗಣಿಸುವದು ಅವಶ್ಯವಾಗಿದೆ.

## ಅವಮಾನ ಮತ್ತು ಗೌರವ

ಅವಮಾನ, ಅಪರಾಧಿಮನೋಭಾವ, ಗೌರವ, ಅಹಂಕಾರ ಮತ್ತು ಒಳ್ಳೇಯ ಪ್ರಜ್ಞೆ ಎರಡೂ ಮಾನಸಿಕ ಮತ್ತು ಸಾಮಾಜಿಕ ಆಯಾಮಗಳನ್ನು ಹೊಂದಿವೆ. ಮಾನಸಿಕವಾಗಿ, ಒಬ್ಬ ವ್ಯಕ್ತಿಯು ಕೆಲವು ಕಾರ್ಯಗಳು ಅಥವಾ ನಡೆತೆಗಳಿಗೆ ಆಂತರಿಕ, ವಯಕ್ತಿಕ ಭಾವನೆಗಳಾದ ಹೆಮ್ಮೆ ಅಥವಾ ಅಪರಾಧಿ ಮನೋಭಾವದ ಪ್ರತಿಕ್ರಿಯೆಯನ್ನು ಹೊಂದಿರುತ್ತವೆ. ಅದೇ ಸಮಯದಲ್ಲಿ, ಒಬ್ಬನು ತಾನು ಮಾಡುತ್ತಿರುವ ಸಂಗತಿಗಳ ಕುರಿತು ಇತರರು ಏನು ಯೋಚಿಸುತ್ತಾರೆ ಎಂಬುದರ ಕುರಿತು ಜಾಗ್ರತಿಯುಳ್ಳವನಾಗಿರುತ್ತಾನೆ. ಅವಮಾನ ಮತ್ತು ಗೌರವ ಒಬ್ಬನ ಸ್ನೇಹಿತರು ಮತ್ತು ಕುಟುಂಬ ಅವನನ್ನು ದೃಷ್ಟಿಸುವ ವಿಧವನ್ನು ಪ್ರತಿಫಲಿಸುತ್ತದೆ. ಆಧುನಿಕ ಸಂಸ್ಕೃತಿ ಪ್ರಾಚೀನ ಗ್ರೀಕೋ-ರೋಮನ್ ಲೋಕಕ್ಕಿಂತ ಜನರು ಅಪರಾಧಿ ಮನೋಭಾವ ಮತ್ತು ಉತ್ತಮ ಪ್ರಜ್ಞೆಯನ್ನು ಜನರು ಗ್ರಹಿಸಿಕೊಳ್ಳವ ವಿಧಾನವು ಬಹಳ ಭಿನ್ನವಾಗಿದೆ. ಈ ಎಲ್ಲಾ ಗುಣಗಳ ಸಾಮಾಜಿಕ ಆಯಾಮ ಪ್ರಾಚೀನ ಲೋಕದಲ್ಲಿ ಅವರು ಈಗಿರುವ ರೀತಿಯಲ್ಲಿ ಗುರುತಿಸಲಾಗಿಲ್ಲ. ಸಾಮಾಜಿಕವಾಗಿ ನೆಲೆಯಾಗಿರುವ ಕಳಕಳಿಯನ್ನು ಯೆಹೂದ್ಯರ ಹಳೆಯ ಪ್ರಾರ್ಥನೆಯಲ್ಲಿ ಕಾಣಬಹುದು: "ನನ್ನನ್ನು ಪಾಪದ ಹಸ್ತದಲ್ಲಿ ಅಥವಾ ಅನ್ಯಾಯದ ಹಸ್ತದಲ್ಲಿ, ಅಥವಾ ಶೋಧನೆಯ ಹಸ್ತದಲ್ಲಿ ಅಥವಾ ಅವಮಾನದ ಹಸ್ತದಲ್ಲಿ ಹಾಕಬೇಡ."[22]

ಪೌಲನು ಕೊರಿಂಥದವರಿಗೆ ಹೇಳುವಾಗ, "ನಿಮ್ಮಲ್ಲಿ ನಾಚಿಕೆ ಹುಟ್ಟಿಸುವದಕ್ಕಾಗಿ" ಇದನ್ನು ಹೇಳುತ್ತೇನೆ (6:5), ಅವನು ಅವರಿಗೆ ಕೆಲವು ಸಣ್ಣ, ಆಂತರಿಕ ಸ್ವರವು ಅವರನ್ನು ಎಚ್ಚರಿಸಲಿ ಎಂದು ಹೇಳುವದಿಲ್ಲ. ಪೌಲ ಮತ್ತು ಅವನ ಪ್ರಥಮ ಓದುಗರಿಗೆ ನಾಚಿಕೆ ಖಾಸಗಿ ವಿಷಯವಾಗಿರಲಿಲ್ಲ. ಬಹಿಂರಂಗವಾದ ಪಾಪ ಅವರ ಕ್ರೈಸ್ತ ಸಮುದಾಯದ ಮೇಲೆ, ಇತರ ಸಭಿಕರ ಎದುರಿನಲ್ಲಿ ಮತ್ತು ಅವಿಶ್ವಾಸಿಗಳ ಲೋಕದ ಎದುರಿನಲ್ಲಿ ಅಗೌರವವನ್ನು ತರುವದಾಗಿತ್ತು, ಸಹೋದರನು ಸಹೋದರನ ವಿರುದ್ಧವಾಗಿ ನ್ಯಾಯಾಲಯಕ್ಕೆ ಹೋಗುವಾಗ, ಒಟ್ಟಾರೆ ಸಭೆಯ ಗೌರವವಕ್ಕೆ ಧಕ್ಕೆ ಬರುತ್ತದೆ. ನಾಚಿಕೆ ಸಾಮಾಜಿಕ ವಿಷಯವಾಗಿದೆ. ನಂಬಿಕೆಯ ಮಾನಸಿಕ ಮತ್ತು ಸಾಮಾಜಿಕ ಆಯಾಮಗಳು ರಕ್ಷಣೆಯನ್ನು ಹೊಂದಿದ ಜೀವಿತವನ್ನು ದೇವರೊಂದಿಗೆ ಜೀವಿಸುವಕ್ಕೆ ಮಹತ್ವವುಳ್ಳವುಗಳಾಗಿವೆ, ಶತಮಾನಗಳಿಂದ ಸಾಮಾಜಿಕ ಆಯಾಮವು ಕ್ರೈಸ್ತರ ಪ್ರಜ್ಞೆಯಲ್ಲಿ ಕಡಿಮೆಯಾಗುತ್ತಾ ಬಂದಿದೆ. ಸಾಮನ್ಯ ಪ್ರಶ್ನೆ ಎಂದರೆ "ಯೇಸು ನಿಮ್ಮ ವ್ಯಯಕ್ತಿಕ ರಕ್ಷಕನಾಗಿದ್ದಾನೋ?" ಒಬ್ಬನು ಕರ್ತನ ಕುರಿತಾಗಿ ಏನು ಭಾವಿಸುತ್ತಾನೋ ಅದಕ್ಕೆ ಅನ್ವಯಿಸುವಂತೆ ತೋರುತ್ತದೆ, ಅದು ಮಾತ್ರ ಪರಿಗಣಿಸಲ್ಪಟುತ್ತದೆ ಮತ್ತು ಸಭೆಯ ಜೀವಿತವು ಯಾವುದೇ ಪರಿಣಾಮವಿಲ್ಲದ್ದಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಕ್ರೈಸ್ತರಾಗಿರುವದಕ್ಕೆ ಒಬ್ಬನು ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಭಾಗಿಯಾಗಿರಬೇಕು, ಸೇವೆ ಮಾಡುವದು ಸಭೆಯ ಮಹತ್ವದ ಭಾಗವಾಗಿದೆ (ನೋಡಿರಿ 1 ಕೊರಿಂಥ 12:12, 13). ನಾಚಿಕೆ, ಅಪರಾಧಿಮನೋಭಾವ, ಗೌರವ, ಹೆಮ್ಮೆ ಅಥವಾ ಉತ್ತಮವಾದ ಪ್ರಜ್ಞೆ ಕ್ರೈಸ್ತ ಸಮುದಾಯವಾಗಿರುವ ಸನ್ನಿವೇಶದಿಂದ ಬರುತ್ತದೆ.

## ಸಲಿಂಗ ಕಾಮ

ಪೌಲನು "ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ" ಎಂದು ಹೇಳಿರುವವುಗಳಲ್ಲಿ "ಪುರುಷಗಾಮಿಗಳು" ಮತ್ತು "ಸಲಿಂಗಕಾಮ" (6:9) ಆಗಿದ್ದಾರೆ. ಅರ್ಥ ಸ್ಪಷ್ಟವಾಗಿದೆ. NASB ಅನುವಾದಕರು ತೆಗೆದುಕೊಂಡ "ಪುರುಷಗಾಮಿಗಳು" ಎಂಬ ಪದದ ಅರ್ಥ ವಾಸ್ತವವಾಗಿ "ಗಂಡಸರು ಗಂಡಸರೊಂದಿಗೆ ಲೈಂಗೀಕ ಸಂಪರ್ಕವನ್ನು ಇಟ್ಟುಕೊಳ್ಳುವದು." ಒಬ್ಬನು ವೇದವಾಕ್ಯದ ಅಧಿಕಾರದ ಕುರಿತಾಗಿ ಅಥವಾ ಸತ್ಯವೇದವು ದೇವರಿಂದ ಪ್ರೇರೇಪಿತವಾದದ್ದು ಎಂಬುದರ ಕುರಿತಾಗಿ ಏನನ್ನು ಬೇಕಾದರು ನಂಬಲಿ, ಪದಗಳು ಸಲಿಂಗಕಾಮವನ್ನು ಅಭ್ಯಾಸಿಸುವದರ ನೈತಿಕವಾದ ಸ್ವೀಕೃತಿಯ ಕುರಿತು ಸತ್ಯವೇದವು ತಟಸ್ಥವಾಗಿದೆ ಎಂಬುದರ ಕುರಿತು ನಂಬಲು ಪದಗಳು ಯಾರೋಬ್ಬರಿಗೂ ಯಾವುದೇ ಅವಕಾಶವನ್ನು ನೀಡಿ ಅನುಮತಿಸುವದಿಲ್ಲ.

ಕೆಲವರು ಸಲಿಂಗಕಾಮದ ಅಭ್ಯಾಸವನ್ನು ದೇವರು ಅವರನ್ನು ಆ ವಿಧದಲ್ಲಿ ನಿರ್ಮಿಸಿದ್ದಾನೆ ಎಂದು ಹೇಳುವದರ ಮೂಲಕ ಸಮರ್ಥಿಸುತ್ತಾರೆ. ಅವರ ವಾದವು ಸಲಿಂಗಕಾಮವು ಸ್ವಾಭಾವಿಕವಾಗಿದೆ, ಕೂದಲಿನ ಬಣ್ಣದಂತೆ ಅಥವಾ ನಿಲುವು ಸ್ವಾಭಾವಿಕವಾಗಿ ಇರುವಂತೆ. ಕ್ರೈಸ್ತರು ತಮ್ಮ ದೈಹೀಕ ಪ್ರವೃತ್ತಿಯನ್ನು ಒತ್ತಾಯಪಡಿಸಬೇಕು ಉದಾಹರಣೆ ಸ್ವಾಭಾವಿಕವಾದ ಕೂದಲಿನ ಬಣ್ಣ ಸಲಿಂಗಕಾಮವನ್ನು ರೂಡಿಯಲ್ಲಿ ತರುವ ಪ್ರಕಾರವಲ್ಲ, ನಂತರದ್ದು ಅನುಸರಿಸಲು ಆಯ್ಕೆ ಮಾಡಿಕೊಂಡಿರದ ಸಂಗತಿಗಳಿಗೆ ಒಬ್ಬನು ತೋರುವ ಒಲವಾಗಿರಬಹುದು ಅಥವಾ ಒಲವು ಆಗಿರದೇ ಇರಬಹುದು. ಪರಿಪೂರ್ಣತೆಯ ಅಳತೆಯನ್ನು ಒಬ್ಬನ ಒಲವಿನಿಂದ ನಿರ್ಧರಿಸುವದಾಗಿದ್ದಲ್ಲಿ, ಸರಿ ಮತ್ತು ತಪ್ಪು ತನ್ನ ಅರ್ಥವನ್ನು ಕಳೆದುಕೊಳ್ಳುತಿತ್ತು. ಒಬ್ಬನು ಇತರರಿಗಿಂತ ಹೆಚ್ಚು ದುರಾಶೆಯುಳ್ಳವನಾಗಿ ಜನಿಸಿದವನಾಗಿದ್ದೇನೆ ಎಂಬುದನ್ನು ತಿಳಿದಿರಬೇಕು, ಇದರಿಂದಾಗಿ ಕಳ್ಳತನವು ಆತನಿಗೆ ಸ್ವೀಕರಿಸುವಂತದ್ದಾಗಿರುತ್ತದೆ. ಮಗುವಿನ ಅತ್ಯಾಚಾರ ಮಾಡುವವನಿಗೆ ಅಥವಾ ಉಗ್ರನಾದವನು ತನ್ನ ಕೋಪವನ್ನು ನಿಗ್ರಹದಲ್ಲಿ ಇಟ್ಟುಕೊಳ್ಳ ಅಸಮರ್ಥನಾಗಿದ್ದೇನೆ ಎಂದು ಹೇಳಿಕೊಳ್ಳುವ ಮನುಷ್ಯನಿಗೆ ಇದೇ ರೀತಿಯ ಕಾರಣಗಳನ್ನು ಸಮರ್ಥಿಸಿಕೊಳ್ಳಲು ಉಪಯೋಗಿಸಿರ ಬಹುದು.

ಉಗ್ರನಾದ ಸಲಿಂಗಕಾಮಿಯು ತಮಗೆ ತಮ್ಮ ಜೀವಿತದ ವಿಧಾನವನ್ನು ಆಯ್ದುಕೊಳ್ಳುವ ಹಕ್ಕಿದೆ ಎಂದು ಒತ್ತಿ ಹೇಳುವದು ಮಾತ್ರವಲ್ಲ, ಪ್ರತಿಯೊಬ್ಬರು ಅವರ ನಡೆತೆಯನ್ನು ಸಮ್ಮತಿಸುವ ದೃಷ್ಟಿಯಲ್ಲಿ ನೋಡಬೇಕು ಎಂದು ಬಯಸುತ್ತಾರೆ. ಹಾಗೂ, ಸತ್ಯವೇದವು ಈ ವಿಷಯದ ಕುರಿತು ಸ್ಪಷ್ಟವಾಗಿ ಮಾತನಾಡುತ್ತದೆ. ಪಕ್ಷಪಾತ, ಹಿಂಸೆ ಮತ್ತು ಕಾನೂನಿನ ನಿರ್ಭಂಧಗಳು ಸಲಿಂಗಕಾಮವನ್ನು ಕೊನೆಗೊಳಿಸುವದಕ್ಕೆ ಅಂತಿಮ ಆಯ್ಕೆಯಲ್ಲ; ಆದರೆ ಯಾವಾಗ ಸತ್ಯವೇದವು ಪಾಪವೆಂದು ಗುರುತಿಸುವ ಈ ಎಲ್ಲಾ ಅಭ್ಯಾಸಗಳನ್ನು ಕ್ರೈಸ್ತರು ಒಪ್ಪಿಕೊಳ್ಳುತ್ತಾರೋ, ಆಗ ಅವರು ಹಕ್ಕುಗಳು ಮತ್ತು ಇತರರ ವಿವೇಚನಾಶಕ್ತಿಯನ್ನು ಉಲ್ಲಂಘಿಸುತ್ತಾರೆ. ವಿವಾಹ, ಸತ್ಯವೇದದಲ್ಲಿ ಬೋಧಿಸಿರುವ ಪ್ರಕಾರ, ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯ ಮಧ್ಯದಲ್ಲಿ ನಡೆಯುತ್ತದೆ (ಆದಿಕಾಂಡ 2:24; ಮತ್ತಾಯ 19:5). ಸಲಿಂಗಕಾಮದ ಅಭ್ಯಾಸ ಒಬ್ಬನನ್ನು ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕೆ ಅಡ್ಡಿಯನ್ನು ಉಂಟುಮಾಡುತ್ತದೆ. ಸತ್ಯವೇದ ಆಧಾರಿತ ಬೋಧನೆ

ಇದನ್ನು ಬೇರೆ ರೀತಿಯಲ್ಲಿ ಹೊಂದಿಕೊಳ್ಳುವದನ್ನು ಅನುಮತಿಸುವದಿಲ್ಲ.

## ಟಿಪ್ಪಣಿಗಳು

[1]The title of this section was taken from *Abundant Life Bible, New Living Translation*, 2nd ed. (Wheaton, Ill.: Tyndale House Publishers, 2004), 873. [2]Wayne A. Meeks, *The First Urban Christians: The Social World of the Apostle Paul*, 2nd ed. (New Haven, Conn.: Yale University Press, 2003), 129. [3]David E. Garland, *1 Corinthians*, Baker Exegetical Commentary on the New Testament (Grand Rapids, Mich.: Baker Academic, 2003), 197. Garland cited ancient sources that support his claims. [4]Cicero *Against Verres* 1.1.1. [5]Emil Schürer, *The History of the Jewish People in the Age of Jesus Christ*, rev. and ed. Geza Vermes, Fergus Millar, and Martin Goodman (Edinburgh: T. & T. Clark, 1986; reprint, London: Bloomsbury, 2014), 3:119. [6]Ibid., 3:119–20. [7]Gordon D. Fee, *The First Epistle to the Corinthians*, The New International Commentary on the New Testament (Grand Rapids, Mich.: Wm. B. Eerdmans Publishing Co., 1987), 233. [8]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 613. [9]David E. Malick, "The Condemnation of Homosexuality in 1 Corinthians 6:9," *Bibliotheca Sacra* 150 (October–December 1993): 490. [10]Stanley J. Grenz, *Sexual Ethics: A Biblical Perspective* (Dallas: Word Publishers, 1990), 206.

[11]Ben Witherington III, *Conflict and Community in Corinth: A Socio-Rhetorical Commentary on 1 and 2 Corinthians* (Grand Rapids, Mich.: Wm. B. Eerdmans Publishing Co., 1995), 166. [12]*1 Clement* 59.3. [13]Meeks, 102. [14]"ತೊಳೆಯುವುದು" ಮತ್ತು ಬ್ಯಾಪ್ಟಿಸಮ್ ಅನ್ನು ಬೇರ್ಪಡಿಸುವ Feeನ ಪ್ರಯತ್ನಗಳು ಸರಿಯಾದ ಪ್ರತಿಕ್ರಿಯೆಗಾಗಿ ಪ್ರೌಢಪ್ರಬಂಧವನ್ನು ಅಗತ್ಯವಿರುತ್ತದೆ. (Fee, 246-47.) ಇತರ ವಿಷಯಗಳ ಪೈಕಿ, ಹೊಸ ಒಡಂಬಡಿಕೆಯ ಲೇಖಕರು ಆಗಾಗ್ಗೆ ἐν (*en*) ಮತ್ತು εἰς (*eis*) ಎಂಬ ಉಪವ್ಯವಸ್ಥೆಗಳನ್ನು ಪರಸ್ಪರ ವಿನಿಮಯ ಮಾಡಿದ್ದಾರೆ ಎಂದು ತಿಳಿದಿದೆ. "ಹೆಸರಿಗೆ" ಬದಲಾಗಿ "ಹೆಸರಿನಲ್ಲಿ" ಪಾಲ್ ಬಳಸುವುದರಿಂದ ಪರಿಗಣನೆಯಿಂದ ಬ್ಯಾಪ್ಟಿಸಮ್ ಅನ್ನು ವಜಾಗೊಳಿಸಲು ಯಾವುದೇ ಕಾರಣವಿಲ್ಲ. ಬ್ಯಾಪ್ಟಿಸಮ್, ತೊಳೆಯುವುದು ಮತ್ತು ಪುನರುತ್ಪಾದನೆಯು ತೀತ 3:5ರಲ್ಲಿ ನಿಕಟವಾಗಿ ಜೋಡಿಸಲ್ಪಟ್ಟಿವೆ. ಹೊಸ ಜನನದ ಕುರಿತು ಪೇತ್ರನು ಉಲ್ಲೇಖಿಸಿರುವಂತೆ ಬ್ಯಾಪ್ಟಿಸಮ್ ಭಾಷೆಯನ್ನು ವಿಮರ್ಶಕರು ನೋಡುತ್ತಾರೆ (1 ಪೇತ್ರ 1:23-2:3). [5]Ibid., 248. [16]The title of this section was taken from *Abundant Life Bible, New Living Translation*, 2nd ed. (Wheaton, Ill.: Tyndale House Publishers, 2004), 873. [17]James D. G. Dunn, *The Theology of Paul the Apostle* (Grand Rapids, Mich.: Wm. B. Eerdmans Publishing Co., 1998), 58. [18]Garland, 234. [19]"Testaments of the Twelve Patriarchs," 5.3, trans. H. C. Kee, in James H. Charlesworth, ed., *The Old Testament Pseudepigrapha* (Garden City, N.Y.: Doubleday & Co., 1983), 1:786. [20]Jimmy Allen, *Survey of Romans*, 7th ed. (Searcy, Ark.: By the author, 1994), 105. [21]"ನೀವು" ಎಂದು ಎರಡನೇ ವ್ಯಕ್ತಿಗೆ ಪೌಲನು ಬಹುವಚನ ಸರ್ವನಾಮಗಳನ್ನು ಬಳಸಿದರೂ ಸಹ ಇದು ನಿಜ. ಕೊರಿಂಥದ ಕ್ರೈಸ್ತರಲ್ಲಿ ಪ್ರತಿಯೊಬ್ಬರಿಗೂ ಸಹ ಇದು ನಿಜ. [22]Talmud *Berakoth* 60b.